HRUDHAYA VAHINI *Kannada Monthly*

# ಹೃದಯ ವಾಹಿನಿ

ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪತ್ರಿಕೆ

RNI NO. KARKAN / 2010 / 34505 ಜನಮನ ಸ್ಪಂದನ ಕನ್ನಡ ಮಾಸ ಪತ್ರಿಕೆ

TO BE POSTED ON 14TH OF EVERY MONTH AT ASHOKNAGAR POST OFFICE

Volume - 6 Issue - 8 14 April 2016 ☎ 0824-4281531, 9886510087 Mangalore

E-mail : hrudayavahini@rediffmail.com www.hrudayavahini.com Price : **Rs. 12-00**

Do You Want Buy Or Sale

**Property**

at **Mangalore.**

Houses, Sites, Flats & Plots

ನೀವು ಮಂಗಳೂರಿನಲ್ಲಿ

ಮನೆ, ನಿವೇಶನ, ಪ್ಲಾಟ್ಸ್ ಮತ್ತು ವಾಣಿಜ್ಯ ನಿವೇಶನ

ಖರೀದಿಸುವ ಅಥವಾ ಮಾರುವ ಉದ್ದೇಶವಿದೆಯೇ?

Contact : **MAASS Realators** ▶ 6

# VATIKA FOUNTAIN RESORT

*Vatika Club & Resorts*

***SPORTS** : Bond over some healthy Competitions. Cricket, Vollyball. Football, Indoor games, We also have a special games like Bungy Jump, Bull Riding and cricket bowling machine which are paid games, And other sporting equipmwnt we have and have a great time!*

*Vatika Resort, a theme Based Holiday resort in Baglur. Just 30 minuts drive from H.S.R. Layout (Sarjapura Road) 1 hour drive from Majestic, Bangalore City, 20 minutes drive from Hosur, 20 minutes from Malur for a break free place and to unwide your hectc life this might be a fantastic place to spend time.*

*Get cozy with loved ones or build business bond over a bonfire by the nature. Adventure games children,s play park and colourful evenings with Raining dances. Travelers gets attracted by breathtaking.*


*Scenery and greenery, it is the land of agriculture, plantation, Mini forestry overall 10 acres of the land.*

*Vatika Resort aims at offering the best weekend holiday experince in an relaxation.*



DINING OPTION : *Open for breakfastm, lunch, and dinner, We will serves Chinese, Tandoor, North Indian and South Indian Cuisine, You'll discover a dining experience that is an exciting journey from start to finish. The spacious and elegant dining room seats up to 100 guests.*






***ATTRACTIVE** : Rain Dance with music, Boating Leisure & Recreation, Nature Trees, Photography, Bird Watching, Plantation Walks Swimming Pool 20X30 feet Swimming Pol and we are maintaing very clean & tidy*

*Well furnished swimming pool area.*

## A PLACE OF JOY


***BANQUET HALL / PARTY HALL***

*Vatika Resorts offers you a complete boutique conference, meeting and banquet venue options. Our party hall having more than 300 seating capacity. for Reception, Best resort for Reception So whatever may be occasion, we would be happy to take the responsibility sightseeing. Get together party, New Year Party, Naming Ceremony etc.,*



Corporate Office : #74, 2nd Floor, BDA Complex, HSR Layout, Bangalore - 560 102.
Reservation Contact No.: 080 25723131, +917760633888 | Resorts : 07373086101 / 102
E-mail : reservation@vatikafountainresort.com | website : www.vatikafountainresort.com
Resort : Thalapalli Village, Bellathur Post, Bagalur, Hosur (Tq) Krishnagiri (Dist)

## ವಿಶ್ವನುಡಿ



ಕೆರೆ ಹಳ್ಳ ಬಾವಿಗಳು ಮೈದೆರದರೆ
ಗುಳ್ಳೆ, ಗೊರಜೆ, ಚಿಪ್ಪು ಕಾಣಬಹುದು
ವಾರಿಧಿ ಮೈದೆರದರೆ ರತ್ನಂಗಳ ಕಾಣಬಹುದು
ಕೂಡಲ ಸಂಘನ ಶರಣರು
ಮನದೆರೆದು ಮಾತನಾಡಿದರೆ
ಲಿಂಗವ ಕಾಣಬಹುದು

– ಬಸವಣ್ಣ

## ಸಂಪಾದಕೀಯ

ಸೂರ್ಯ ಕಿರಣ

# ಇ – ವೀಸಾ

ಒಂದು ದೇಶ ವಿದೇಶಿಯ ವ್ಯಕ್ತಿಯೊಬ್ಬನಿಗೆ ತನ್ನ ದೇಶದೊಳಗೆ ಪ್ರವೇಶ ಮಾಡಲು ಮತ್ತು ಇಂತಿಷ್ಟು ಸಮಯ ಇರಲು ಷರತ್ತು ಬದ್ಧವಾಗಿ ನೀಡುವ ಅಧಿಕೃತ ಅನುಮತಿಯ ದಾಖಲೆಯೆ ವೀಸಾ.

"ಪಾಸ್‌ಪೋರ್ಟ್" ಮತ್ತು ವೀಸಾ ಎರಡೂ ಬೇರೆ ಬೇರೆ ದಾಖಲೆಗಳು. ಇದರ ಬಗ್ಗೆ ಪ್ರವಾಸಿಗಳಿಗೆ ಸ್ಪಷ್ಟ ಅರಿವಿರಬೇಕು. ಕೆಲವು ದೇಶಗಳು ತಮ್ಮ ಮಿತ್ರ ದೇಶದ ಪ್ರಜೆಗಳಿಗೆ ಪಾಸ್‌ಪೋರ್ಟ್ ಆಧಾರದ ಮೇಲೆ ಪ್ರವೇಶ ನೀಡುತ್ತವೆ. ಉದಾಹರಣೆಗೆ ಭಾರತದ ಪ್ರಜೆಗಳಿಗೆ ನೇಪಾಳ ಮತ್ತು ಭೂತಾನ್‌ಗೆ ಹೋಗಲು ವೀಸಾ ಅವಶ್ಯಕತೆಯಿಲ್ಲ ಪಾಸ್‌ಪೋರ್ಟ್ ಇದ್ದರೆ ಸಾಕು. ನೇಪಾಳ ಭಾರತೀಯರಿಗೆ ಅಧಿಕೃತ ಫೋಟೊ, ಐಡಿ ಹೊಂದಿದ್ದರೆ ಪ್ರವೇಶ ನೀಡುತ್ತದೆ. ವೀಸಾ – ಇದರ ವಿಸ್ತಾರಿತ ರೂಪ **Visitors International Stay Admission.**

ವಿಮಾನ ನಿಲ್ದಾಣದ ಒಳಹೋಗುವಾಗ ಟಿಕೇಟ್ ಪರಿಶೀಲಿಸಿ ಒಳ ಬಿಡಲಾಗುತ್ತದೆ. ಅಂತರಾಷ್ಟ್ರೀಯ ಪ್ರಯಾಣಿಕರಿಗೆ ಚೆಕ್ ಇನ್ ವಿಭಾಗದಲ್ಲಿ ವೀಸಾದ ಪ್ರಾಥಮಿಕ ಪರಿಶೀಲನೆ ಮಾಡಿ ಮುಂದೆ ಇಮಿಗ್ರೇಷನ್‌ಗೆ ಕಳುಹಿಸಲಾಗುವುದು. ಇಲ್ಲಿ ವೀಸಾ ವಿಷಯದಲ್ಲಿ ಸಂಪೂರ್ಣವಾಗಿ ದಾಖಲೆಗಳನ್ನು ಪರಿಶೀಲಿಸಲಾಗುವುದು ಮತ್ತು ವಿದೇಶ ಪ್ರವೇಶಿದ ಉದ್ದೇಶ ಕುರಿತು ವಿಚಾರಿಸುತ್ತಾರೆ ಎಲ್ಲವೂ ಸಮರ್ಪಕವಾಗಿದ್ದರೆ ಭದ್ರತಾ ತಪಾಸಣೆ **(Security Check)**ಗೆ ಕಳುಹಿಸುತ್ತಾರೆ. ಇಲ್ಲವಾದಲ್ಲಿ ಅಲ್ಲಿಯೇ ತಡೆ ಹಿಡಿಯಬಹುದು.

ಪ್ರವಾಸಿ ಭೇಟಿ ನೀಡುವ ದೇಶದ ವಿಮಾನ ನಿಲ್ದಾಣದಲ್ಲೂ ಇದೇ ಪ್ರಕ್ರಿಯೆ ಪುನರಾವರ್ತನೆಗೊಳ್ಳುತ್ತದೆ. ಸ್ವಲ್ಪ ಮಟ್ಟಿನ ವ್ಯತ್ಯಾಸಗಳಿರಬಹುದು ಅಷ್ಟೆ. ಕೆಲವು ದೇಶಗಳಲ್ಲಿ **Immigration** (ವಲಸೆ ಪರಿಶೀಲನೆ)ನ್ನು **Passport Control** ಎಂದು ಕರೆಯುತ್ತಾರೆ.


ಮೊದಲು ವೀಸಾವನ್ನು ಪಾಸ್‌ಪೋರ್ಟ್‌ನ ಮೇಲೆ ಅಂಟಿಸಲಾಗುತ್ತಿತ್ತು. ಇದನ್ನು **Physical Visa** ಎನ್ನುತ್ತಾರೆ. ಈಗಲೂ ಅದು ಚಾಲ್ತಿಯಲ್ಲಿದೆ. ಆದರೆ ಕೆಲವು ದೇಶಗಳು **e Visa** ಅಂದರೆ ಇಲೆಕ್ಟ್ರಾನಿಕ್ ವೀಸಾವನ್ನು ಜಾರಿಗೆ ತಂದಿವೆ. ಇದು ದಶಕಗಳ ಹಿಂದಿನಿಂದಲೂ ಬಳಕೆಯಲ್ಲಿದೆ. ಇ–ವೀಸಾ ಗಲ್ಫ್ ರಾಷ್ಟ್ರಗಳಲ್ಲಿ ಹೆಚ್ಚು ಬಳಕೆಯಲ್ಲಿದೆ. ಆನ್‌ಲೈನ್ ಮೂಲಕ ನೀಡುವ ಇ–ವೀಸಾಕ್ಕೆ ಮೂಲ ಪಾಸ್‌ಪೋರ್ಟ್ ಒದಗಿಸಬೇಕಾಗಿಲ್ಲ. ಪಾಸ್‌ಪೋರ್ಟ್ ಮತ್ತು ಇತರ ದಾಖಲೆಗಳ ಸ್ಕ್ಯಾನ್ ಪ್ರತಿ ಮತ್ತು ಕ್ರೆಡಿಟ್ ಕಾರ್ಡ್‌ನಲ್ಲಿ ಶುಲ್ಕ ಪಾವತಿಸಿದರೆ, ದುಬೈ ಮತ್ತು ಬಹರೇನ್‌ನಂತಹ ದೇಶಗಳು ಎರಡೇ ದಿನಗಳಲ್ಲಿ ಪರಿಶೀಲಿಸಿ ವೀಸಾ ನೀಡುತ್ತವೆ ಇಲ್ಲವೆ ದಾಖಲೆಗಳು ಸಾಚವಲ್ಲವೆಂದು ಕಂಡುಬಂದಲ್ಲಿ ತಿರಸ್ಕರಿಸುತ್ತವೆ. ಆ ವಿಧಾನದಲ್ಲಿ ಬಹಳ ಬೇಗ ವೀಸಾ ಪಡೆದುಕೊಳ್ಳಲು ಸಹಕಾರಿಯಾಗಿದೆ.

ಯಾವುದೇ ದೇಶದ ಪ್ರವಾಸೋದ್ಯಮ ಮತ್ತು ವಾಣಿಜ್ಯೋಧ್ಯಮದ ಪ್ರಗತಿಗೆ ಈ ವ್ಯವಸ್ಥೆ ತುಂಬಾ ಸಹಕಾರಿ.

ಆದರೆ ಇತ್ತೀಚಿನ ದಿನಗಳಲ್ಲಿ ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಇಬ್ಬರು ವಿದೇಶಿ ಪ್ರವಾಸಿಗರು, ಇ–ವೀಸಾ ಪರಿಶೀಲನೆಯ ವ್ಯವಸ್ಥೆ ಇಲ್ಲದ ಕಾರಣ ಅವರಿಗೆ ಆಗಮನಕ್ಕೆ ಅನುಮತಿ ದೊರೆಯದ ಕಾರಣ ಹಿಂದೆ ಕಳುಹಿಸಲಾಯಿತು ಎನ್ನುವ ವರದಿ ಪತ್ರಿಕೆಗಳಲ್ಲಿ ಬಂದಿರುತ್ತದೆ. ಇದೊಂದು ವ್ಯವಸ್ಥೆಯ ನ್ಯೂನ್ಯತೆ. ಇ–ವೀಸಾ ನೀಡುವಾಗಲೇ ಸಂಬಂಧಪಟ್ಟ ಇಲಾಖೆ ಪ್ರವಾಸಿಗಳಿಗೆ ಮಾಹಿತಿ ನೀಡಬೇಕು ಭಾರತದ ಯಾವ ಯಾವ ವಿಮಾನ ನಿಲ್ದಾಣಗಳಲ್ಲಿ ಇ–ವೀಸಾಕ್ಕೆ ಮಾನ್ಯತೆ ಇಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಬೆಂಗಳೂರಿನಲ್ಲಿ ಇ–ವೀಸಾ ಅಧಿಕೃತವಾಗಿದೆ ಆದರೆ ವಿದೇಶದಿಂದ ಮಂಗಳೂರಿಗೆ ಬಂದಿಳಿದ ವಿದೇಶಿ ಪ್ರವಾಸಿಗರು ಇ–ವೀಸಾದೊಂದಿಗೆ ಬೆಂಗಳೂರಿಗೆ ಪ್ರಯಾಣಿಸಲು ಸಾಧ್ಯವಿಲ್ಲ. ಕಾರಣ ಅವರು ಡೊಮಿಸ್ಟಿಕ್ (ಅಂತರ್ದೇಶಿ) ವಿಮಾನದಲ್ಲಿ ಪ್ರಯಾಣಿಸಬೇಕಾಗುತ್ತದೆ. (ಆಗಮನ)ಗೆ ಅನುಮತಿ ಇಲ್ಲದ ಕಾರಣ ಅವರು ಅಂತರ್ದೇಶಿ ವಿಮಾನ ಏರುವಂತಿಲ್ಲ. ಆದ್ದರಿಂದ ಆ ಪ್ರವಾಸಿ ವಿದೇಶದಲ್ಲಿ ಎಲ್ಲಿ ವಿಮಾನ ಏರಿದ್ದರೊ ಅಲ್ಲಿಗೆ ಹಿಂತಿರುಗಿ, ಉದಾಹರಣೆಗೆ ಅದು ದುಬೈ ಆಗಿರಬಹುದು ಅಥವಾ ಮತ್ಯಾವುದೇ ದೇಶ ಆಗಿರಬಹುದು, ಮತ್ತೆ ಅಲ್ಲಿಂದ ಅವರು ಇ–ವೀಸಾಕ್ಕೆ ಅನುಮತಿ ಇರುವ ವಿಮಾನ ನಿಲ್ದಾಣದಲ್ಲಿ ಇಳಿಯಬೇಕು.

ಆ ಪ್ರವಾಸಿಗೆ ಈ ಎಲ್ಲಾ ಖರ್ಚನ್ನು ಭರಿಸುವವರು ಯಾರು? ಅಥವಾ ಆ ಪ್ರವಾಸಿ ತುರ್ತು ಚಿಕಿತ್ಸೆಗಾಗಿ ಭಾರತಕ್ಕೆ ಆಗಮಿಸಿದ್ದರೆ ಆರೋಗ್ಯದ ಮೇಲೆ ಆಗಬಹುದಾದ ಹೆಚ್ಚಿನ ಹಾನಿಗೆ ಹೊಣೆ ಯಾರು? ಇಂತಹ ಪ್ರಕರಣಗಳು ದೇಶದ ಬೇರೆ ಬೇರೆ ವಿಮಾನ ನಿಲ್ದಾಣಗಳಲ್ಲೂ ನಡೆದಿರಬಹುದು. ಇದನ್ನೆಲ್ಲ ವಿದೇಶಾಂಗ ಸಚಿವಾಲಯ ಗಂಭೀರವಾಗಿ ಪರಿಗಣಿಸಬೇಕು. ಇ–ವೀಸಾದಲ್ಲಿ ಪ್ರವೇಶ ಪಡೆಯಬಹುದಾದ ವಿಮಾನ ನಿಲ್ದಾಣಗಳ ಮಾಹಿತಿಯನ್ನು ನಿಖರವಾಗಿ ನೀಡಿ ಆದ ಅಚಾತುರ್ಯ ಮರುಕಳಿಸದಂತೆ ಕ್ರಮಕೈಗೊಳ್ಳಬೇಕು. ●

# ಖ್ಯಾತ ವ್ಯಂಗ್ಯ ಚಿತ್ರಕಾರ ಎಸ್. ಡಿ. ಪಡ್ನಿಸ್



ಶಿವರಾಮ್ ದತ್ತಾತ್ರೇಯ ಪೆಡ್ನಿಸ್

ಮುಂಬೈ : ಯು ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಿಂದ ಶಿಕ್ಷಣ ಪಡೆದ ಶ್ರೀಯುತ ಯೆಸ್.ಡಿ. ಪಡ್ನಿಸ್ ನಿಜವಾಗಿ ಪೂರ್ತಿ ಅವಧಿಯ ಕಾರ್ಟೂನಿಸ್ಟ್ ಅಲ್ಲ, ಅವರು ಕಮರ್ಷಿಯಲ್ ಆರ್ಟಿಸ್ಟ್. ಜಾಹೀರಾತಿಗೆ ಡಿಸೈನ್ ರಚಿಸುವ ವೃತ್ತಿ ಅವರದ್ದು. ಕಾರ್ಟೂನ್ ಅವರ ಹವ್ಯಾಸ.

**huns publication** ಅವರ ಮೋಹಿನಿ ಎಂಬ ಮ್ಯಾಗಜಿನ್‌ನಲ್ಲಿ 1951ರಲ್ಲಿ ದಿ. ಅನಂತ್ ಅಂತರ್ಕರ್ ಅಂದಿನ ಎಡಿಟರ್ ಅವರ ಮಾರ್ಗದರ್ಶನದಲ್ಲಿ ಮುಖ ಪುಟ ಚಿತ್ರ ರಚಿಸಿದ ಶ್ರೀ ಪಡ್ನಿಸ್ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಅಂದಿನಿಂದ ಪಡ್ನಿಸ್ ಅವರು ಅಡಿ ಬರಹಗಳಿಲ್ಲದ ಭಾಷೆ ಗಡಿ ಇಲ್ಲದ ಶುದ್ಧ ಗೆರೆ ಹಾಗೂ ಬಣ್ಣಗಳಿಂದ ಜನಮನ ಶೂರೆಗೊಂಡಿತ್ತು.

ಕಳೆದ ವರ್ಷದಲ್ಲಿ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್ ಒಂದರಲ್ಲಿ ಅವರ ಈ ಕಾರ್ಟೂನ್‌ಗಳ ಪ್ರದರ್ಶನವನ್ನು ಸಹಸ್ರಾರು ಕಲಾಭಿಮಾನಿಗಳು ನೋಡಿ ಆನಂದಿಸಿದರು.

ಅವರ **Laughing gallery** ಎಂಬ ಕಾರ್ಟೂನ್ ಬುಕ್ ಹಾಟ್ ಕೇಕ್ ತರಹ ಮಾರಾಟವಾಯಿತು.

ಇವರ ಮೊದಲ ಕಾರ್ಟೂನ್ ಎಕ್ಸಿಬಿಷನ್ ಮುಂಬೈಯಾ ಜಹಂಗೀರ್ ಆರ್ಟ್ ಗ್ಯಾಲರಿಯಲ್ಲಿ 1965ರಲ್ಲಿ ಪ್ರದರ್ಶನಗೊಂಡಿತು. ಗಡಿಬಿಡಿಯಲ್ಲೂ ಈ ಪ್ರದರ್ಶನಗಳು ಯಶಸ್ವಿ ಕಂಡಿದೆ. ಲೀನ ಮತ್ತು ರೂಪ ಅವರಿಬ್ಬರು ಹೆಣ್ಣು ಮಕ್ಕಳು ಹಾಗೂ ಪತ್ನಿ ಶಕುಂತಲ ಜತೆಗೆ ಮುಂಬೈಯಲ್ಲಿ ಸುಖ ಜೀವನ ಕಳೆಯುತ್ತಿದ್ದಾರೆ.

ಸನ್ಮಾನಗಳು : **cag award 1954**, ಮಹಾರಾಷ್ಟ್ರ ಸೇವಾ ಸಂಘ **–2000, marmik weekly-2000, paranjape foundation-2000,life time acheivement award,iic,bangalore-2001**

– *ಹರಿಶ್ಚಂದ್ರ ಶೆಟ್ಟಿ*

### ಎಸ್. ಡಿ. ಪಡ್ನಿಸ್ ಕೆಲವು ವ್ಯಂಗ್ಯ ಚಿತ್ರಗಳು




## ಪರಿಹಾರ...!

ಅಂಗಡಿಯಲ್ಲಿ ಕೆಲಸ ಮಾಡುವ ಒಬ್ಬ ಚಿಕ್ಕ ಹುಡುಗ ಯಾರಿಗೋ ಡೆಲಿವರಿ ಕೊಡಲು ಮೊಟ್ಟೆಯು ಬಟ್ಟೆಯನ್ನಿಟ್ಟುಕೊಂಡು ಸೈಕಲಿನಲ್ಲಿ ಹೋಗುತ್ತಿದ್ದಾಗ ಸೈಕಲ್ ಸ್ಕಿಡ್ ಆಗಿ ಕೆಳಕ್ಕೆ ಬಿದ್ದು ಮೊಟ್ಟೆಗಳೆಲ್ಲ ಒಡೆದು ಹೋದವು. ಆಚೆ ಈಚೆ ಹೋಗುವವರು ಹುಡುಗನ ಸುತ್ತ ನೆರೆದರು. ಒಬ್ಬ ಅವನನ್ನು ಎತ್ತಿ ನಿಲ್ಲಿಸಿದರೆ ಮಗದೊಬ್ಬ ಅವನ ಸೈಕಲ್ಲನ್ನು ಎತ್ತಿ ಸ್ಟ್ಯಾಂಡ್ ಹಾಕಿ ನಿಲ್ಲಿಸಿದನು.

"ಸೈಕಲ್ ಹೊಡೆಯುವಾಗ ಜಾಗ್ರತೆ ಇರಬೇಕು ಅಂತ ಗೊತ್ತಿಲ್ವಾ ನಿನಗೆ?

"ನೋವಾಯಿತಾ? ಹೀಗೆ ಅವನಿಗೆ ಸಾಂತ್ವನ ಹೇಳುತ್ತಿದ್ದಾಗ ಅಲ್ಲಿಗೆ ಒಬ್ಬ ವಯಸ್ಸಾದ ಮಾರ್ವಾಡಿಯವ ಬಂದ. ಅವನ ಹುಡುಗನ ಕೈ ಹಿಡಿದು ಏನಾಯಿತು? ಎಂದು ಕೇಳಿ ತಿಳಿದುಕೊಂಡು,

ಛೇ! ಛೇ! ಮೊಟ್ಟೆ ಎಲ್ಲಾ ಒಡೆದು ಹೋಯಿತ್ತಲ್ಲಾ, ನಿನ್ನ ಮಾಲೀಕನಿಗೆ ಏನು ಹೇಳುತ್ತೀಯಾ? ಅವನು ನಿನ್ನ ಸಂಬಳದಲ್ಲಿ ಹಣವನ್ನು ಕಟ್ ಮಾಡುತ್ತಾನೆ" ಎಂದು ಹೇಳಿ ಎಲ್ಲರಿಗೂ ಕಾಣಿಸುವಂತೆ ತನ್ನ ಕಿಸೆಯಿಂದ ಹತ್ತು ರೂಪಾಯಿ ತೆಗೆದು ಹುಡುಗನ ಕೈಯಲ್ಲಿಟ್ಟು.

"ಇದನ್ನು ತೆಗೆದುಕೊಳ್ಳು, ಹಾಗೆಯೇ ಇಲ್ಲಿ ನೆರೆದವರೆಲ್ಲ ನಿನಗೆ ಅಲ್ಪ ಸ್ವಲ್ಪ ಹಣ ಸಹಾಯ ಮಾಡಬಹುದು, ಅದನ್ನೆಲ್ಲ ಒಟ್ಟು ಮಾಡಿಕೊಂಡು ನಿನ್ನ ಮಾಲೀಕನಿಗೆ ಕೊಡು" ಎಂದು ಹೇಳಿ ಅಲ್ಲಿಂದ ಹೋದನು. ಮುದುಕನೊಬ್ಬ ಬಡಪಾಯಿ ಹುಡುಗನಿಗೆ ಸಹಾಯ ಮಾಡಿದ್ದನ್ನು ನೋಡಿ ನೆರೆದವರೆಲ್ಲ ಕೆಲವರು ತಮ್ಮಿಂದಾದಷ್ಟು ಹಣ ಕೊಟ್ಟು ತಮ್ಮ ಪಾಡಿಗೆ ತಾವು ಹೋದರು. ಹುಡುಗನಿಗೆ ಹಣ ಒಟ್ಟಾದುದು ನೋಡಿ ಸಂತೋಷವಾಯಿತು. ಅವನು ಅಲ್ಲಿಂದ ಹೋಗಲು ಸೈಕಲ್ ಹತ್ತುವಾಗ ಒಬ್ಬಾತ ಅವನ್ನು ತಡೆದು ನಿಲ್ಲಿಸಿ "ಅಲ್ಲಪ್ಪಾ, ಆ ಮುದುಕ ಇದ್ದುದಕ್ಕೇ ಆಯಿತು. ಇಲ್ಲವಾಗಿದ್ದರೆ ನಿನಗೆ ಎಷ್ಟು ಕಷ್ಟವಾಗುತ್ತಿತ್ತು ಅಲ್ಲವಾ... ನಿನ್ನ ಅಂಗಡಿ ಮಾಲೀಕನಿಗೆ ಎಲ್ಲಿಂದ ಹಣ ಕೊಡುತ್ತಿದ್ದೀಯಾ?" ಎಂದನು. ಅದಕ್ಕೆ ಹುಡುಗ, "ಆ ಮುದುಕನೇ ನನ್ನ ಅಂಗಡಿ ಮಾಲೀಕ" ಎಂದು ಹೇಳಿ ಸೈಕಲ್ ಹತ್ತಿ ಹೋದಾಗ ಅವನು ತೆರದ ಬಾಯಿ ಹಾಗೇ ಇಟ್ಟುಕೊಂಡು ಅಲ್ಲೇ ನಿಂತನು! ●

# ಎ.ಜೆ. ಶೆಟ್ಟಿಯವರಿಗೆಅಭಿನಂದನೆ



ದ.ಕ. ಜಿಲ್ಲಾಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕಲ್ಕೂರ ಪ್ರತಿಷ್ಠಾನದ ವತಿಯಿಂದ ಎ.ಜೆ. ಶೆಟ್ಟಿಯವರಿಗೆ ಅಭಿನಂದನೆ

ಮಂಗಳೂರು ವಿವಿ ಗೌರವಡಾಕ್ಟರೇಟ್ ಪುರಸ್ಕೃತರಾದ ಎ.ಜೆ. ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಎ.ಜೆ. ಶೆಟ್ಟಿಯವರನ್ನು ಕನ್ನಡ ಸಾಹಿತ್ಯ ಪರಿಷತ್ತುದ.ಕ. ಜಿಲ್ಲೆ ಮತ್ತು ಕಲ್ಕೂರ ಪ್ರತಿಷ್ಠಾನದ ವತಿಯಿಂದ ಗೌರವಿಸಲಾಯ್ತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷಎಸ್. ಪ್ರದೀಪಕುಮಾರ ಕಲ್ಕೂರ ಗೌರವಿಸಿದರು.

ರತ್ನಾಕರ ಜೈನ್, ಕದ್ರಿ ದೇವಳದ ಆಡಳಿತಾಧಿಕಾರಿ ನಿಂಗಯ್ಯ, ಗೋಕುಲ್‌ಕದ್ರಿ, ದೇವದಾಸ್ ದಿನೇಶ್ ದೇವಾಡಿಗ, ಪ್ರಭಾಕರರಾವ್ ಪೇಜಾವರ, ನಿರಂಜನ್ ಸಾಲಿಯಾನ್, ಅರುಣ್‌ಕದ್ರಿ ಮುಂತಾದವರು ಉಪಸ್ಥಿತರಿದ್ದರು.

# ಪುತ್ತೂರಿನ ಬೃಹತ್ ಶೋ "ಪುತ್ತೂರ ಹಬ್ಬ"

ಪುತ್ತೂರು : ಪುತ್ತೂರಿನ ಪ್ರಖ್ಯಾತ ಮಹತೋಬಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವದ ಸಲುವಾಗಿ 'ಸನ್‌ಫ್ಯೂರ್' ರಿಫೈನ್ಡ್ ಸನ್ ಫ್ಲವರ್ ಆಯಿಲ್ ಪ್ರಸ್ತುತಪಡಿಸುತ್ತಿದೆ 'ಪುತ್ತೂರ ಹಬ್ಬ' ಎಂಬ ಬೃಹತ್ ಮನರಂಜನಾ ಕಾರ್ಯಕ್ರಮವನ್ನು ಎ.16ರಂದು ಟೈಮ್ & ಟ್ರೈಡ್ ಸಂಸ್ಥೆಯು ಆಯೋಜಿಸಲಿದೆ.

ಪುತ್ತೂರು ನಗರದ ಇತಿಹಾಸದಲ್ಲಿಯೇ ಇಂತಹ ಬೃಹತ್ ಮಟ್ಟದ ಪ್ರಥಮ ಕಾರ್ಯಕ್ರಮ ಇದಾಗಿದ್ದು ಆ ದಿನ ಸಂಜೆ 7ರಿಂದ ಪುತ್ತೂರಿನ ಕೊಂಬೆಟ್ಟುವಿನಲ್ಲಿರುವ ಸರಕಾರಿ ಜೂನಿಯರ್ ಕಾಲೇಜು ಸಮೀಪದ ತಾಲೂಕು ಕ್ರೀಡಾಂಗಣದಲ್ಲಿ ನಡೆಯಲಿದೆ.

ತಾರಾಕರ್ಷಣೆಯ ಈ ಕಾರ್ಯಕ್ರಮದಲ್ಲಿ ಸ್ಯಾಂಡಲ್‌ವುಡ್ ಹಾಗೂ ತುಳು ಚಿತ್ರರಂಗದ ಜನಪ್ರಿಯ ನಟ. ನಟಿಯರು, ಟಿವಿ ಧಾರಾವಾಹಿಯ ಖ್ಯಾತನಾಮರೂ ಸೇರಿದಂತೆ ಹಲವು ಪ್ರತಿಭಾವಂತ ಯುವ ಗಾಯಕ ಗಾಯಕಿಯರು ಭಾಗವಹಿಸಲಿದ್ದು ಲೈವ್ ಕಾನ್ಸರ್ಟ್, ಮ್ಯಾಜಿಕ್, ನೃತ್ಯ, ಹಾಡುಗಳು, ಕಾಮಿಡಿ, ಆಕರ್ಷಕ ಸುಡುಮದ್ದು ಪ್ರದರ್ಶನ ಮತ್ತಿತರ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯಲಿವೆ.

ಭಾಗವಹಿಸುವ ಪ್ರಮುಖರು: 'ಲೈಫು ಇಷ್ಟೇನೆ' ಖ್ಯಾತಿಯ ನಟಿ ಸಿಂಧು ಲೋಕನಾಥ್, ಅಗ್ನಿ ಸಾಕ್ಷಿ ಧಾರಾವಾಹಿಯ 'ಸನ್ನಿಧಿ'– ನಟಿ ವೈಷ್ಣವಿ, ಅಶ್ವಿನಿ ನಕ್ಷತ್ರ ಧಾರಾವಾಹಿಯ ಸಿಲ್ವರ್ ಸ್ಟಾರ್ ಜೆಕೆ, 'ನಮ್ಮ ಕುಡ್ಲ' ಹೊಸ ತುಳು ಚಿತ್ರದ ತಾರೆಯರು ಹಾಗೂ 'ಧಬಕ್ ಧಬಾ ಐಸಾ' ಹೊಸ ತುಳು ಚಿತ್ರ ತಂಡದ ತಾರಾಮಣಿಗಳು ಹಾಗೂ ಇನ್ನಿತರ ಚಲನಚಿತ್ರ ಮತ್ತು ಧಾರಾವಾಹಿಯ ನಟ ನಟಿಯರು ಭಾಗವಹಿಸಲಿದ್ದಾರೆ.

ವಿಶೇಷ ಆಕರ್ಷಣೆಯಾಗಿ 'ಝೀ ಟಿವಿ' ಹಿಂದಿ–'ಸ ರಿ ಗ ಮ ಪ' ಲಿಟ್ಟಲ್ ಚಾಂಪ್ಸ್ ವಿಜೇತರಾದ ಗಗನ್ ಗಾಂವ್‌ಕರ್, 'ಝೀ ಕನ್ನಡ' 'ಸ ರಿ ಗ ಮ ಪ' ಲಿಟ್ಟಲ್ ಚಾಂಪ್ಸ್ (ಸೀಝನ್ 10) ವಿಜೇತೆ ಸುಪ್ರಿಯಾ ಜೋಷಿ, 'ಝೀ ಕನ್ನಡ' 'ಸ ರಿ ಗ ಮ ಪ' ಲಿಟ್ಟಲ್ ಚಾಂಪ್ಸ್‌ನ ಉದಯೋನ್ಮುಖ ಗಾಯಕಿ ನಿಹಾರಿಕಾ, 'ಝೀ ಕನ್ನಡ' 'ಸ ರಿ ಗ ಮ ಪ' ಲಿಟ್ಟಲ್ ಚಾಂಪ್ಸ್ (ಸೀಝನ್ 8) ವಿಜೇತೆ ಒಹಿಲೇಶ್ವರಿ ಎಂ.ಕೆ, ಹಾಗೂ 1,500ಕ್ಕೂ ಮಿಕ್ಕಿ ಹಲವಾರು ಟಿ.ವಿ ಹಾಗೂ ಇನ್ನಿತರ ಕಾರ್ಯಕ್ರಮಗಳಲ್ಲಿ ಮಿಂಚಿದ ನಿಶಾನ್ ರೈ ಮುಂತಾದ ಪ್ರತಿಭಾವಂತ ಯುವ ಕೋಗಿಲೆಗಳು ಪ್ರೇಕ್ಷಕರನ್ನು ಮನರಂಜಿಸಲಿದ್ದಾರೆ.

ಅಲ್ಲದೆ ಕಾರ್ಯಕ್ರಮದ ಕೇಂದ್ರ ಬಿಂದುವಾಗಿ "ಆಟಗಾರ" ಚಲನಚಿತ್ರದ 'ತಾರಾಮಯ್ಯ' ಹಾಡಿನ ಖ್ಯಾತಿಯ ಬೆಂಗಳೂರಿನ ಸುಪ್ರಿಯಾ ಲೋಹಿತ್, ಬೆಂಗಳೂರಿನ ಪ್ರತಿಭಾನ್ವಿತ ಹಾಡುಗಾರ ಹಾಗೂ ಚಲನಚಿತ್ರ ನಟ ಯುವರಾಜ್, ತೀರ್ಥಹಳ್ಳಿಯ ಸಂಗೀತ ಸುಧೆ ದಿವ್ಯಾ ರಾಮಚಂದ್ರ, ಕೇರಳದ ಪ್ರಸಿದ್ಧ ಗಾಯಕ ಪೊಲ್ಲಾಚ್ಚಿ ಮುತ್ತು, ಕೇರಳದ ಮೈಕೆಲ್ ಜಾಕ್ಸನ್ ಎಂದೇ ಜನಜನಿತರಾದ ಸಿಬಿಲ್ ಜಾನ್ಸನ್‌ರಿಂದ ಮನಸೆಳೆಯುವ ನೃತ್ಯ ಪ್ರದರ್ಶನದೊಂದಿಗೆ ಹಾಡುಗಾರಿಕೆ, ಪ್ರತಿಭಾವಂತ ಗಾಯಕರಾದ ಪ್ರಕಾಶ್ ಮಹದೇವನ್ ಹಾಗೂ ರೂಪಾ ಪ್ರಕಾಶ್, ಮಂಗಳೂರಿನ ಹಿರಿಯ ಹಾಗೂ ಮೆಲೋಡಿಯಸ್ ಸ್ಟಾರ್ ಗಾಯಕ ಮೊಹಮ್ಮದ್ ಇಕ್ಬಾಲ್, ತಮ್ಮ ಮಧುರ ಕಂಠದಿಂದ ಪ್ರೇಕ್ಷಕರ ಮನ ತಣಿಸಲಿದ್ದಾರೆ.

ವಿವಿಧ ವಿನೋದಾವಳಿ : 'ಬಲೆ ತೆಲಿಪಾಲೆ'ಯಿಂದ ಜನಪ್ರಿಯರಾದ ಉಮೇಶ್ ಮಿಜಾರ್ ಹಾಗೂ ಬಳಗ ಮತ್ತು ಬೆಂಗಳೂರಿನ ಚಲನಚಿತ್ರ ನಟ ಮಿಮಿಕ್ರಿ ಗೋಪಿ ಇವರಿಂದ ಅತ್ಯದ್ಭುತ ಕಾಮಿಡಿ ಶೋಗಳು, ತ್ರಿಶ್ಯೂರಿನ ಸೌಂಡ್ ಮ್ಯಾಜಿಕ್ ಕಲಾವಿದ ಪ್ರತಿಜ್ಞನ್ ಹಾಗೂ ತ್ರಿಶ್ಯೂರಿನವರೇ ಆದ ಶ್ರೀನಾದ್‌ಇವರಿಂದ ಅಭೂತಪೂರ್ವ ಜಗ್ಲರ್ಸ್ ಹಾಗೂ ಅಪಾಯಕಾರಿ ಅಗ್ನಿ ಸಾಹಸ ಪ್ರದರ್ಶನ ಹಾಗೂ ಮಂಗಳೂರಿನ ಪ್ರಖ್ಯಾತ ನೃತ್ಯ ತಂಡ 'ವೆಲೋಸಿಟಿ' ಸುಮಾರು 60ಕ್ಕೂ ಹೆಚ್ಚು ನೃತ್ಯರಾರರಿಂದ ಅದ್ಭುತ ನೃತ್ಯ ಪ್ರದರ್ಶನ, ದೇಶ ವಿದೇಶಗಳಲ್ಲಿ ಮೂರು ಸಾವಿರಕ್ಕೂ ಮಿಕ್ಕಿ ಪ್ರದರ್ಶನ ನೀಡಿದ ಸಂಗೀತ ತಂಡವಾದ 'ಸ್ಟ್ರಿಂಗ್' ಇದರ ಮುಖ್ಯ ರುವಾರಿ ರಾಜ್‌ಗೋಪಾಲ್ ಮತ್ತು ಸಂಗಡಿಗರಿಂದ ಸಂಗೀತದ ರಸದೌತಣ ಈ ಕಾರ್ಯಕ್ರಮದ ವಿಶೇಷತೆಯಾಗಿದೆ.

ಈ ಕಾರ್ಯಕ್ರಮವನ್ನು ಪ್ರಸಿದ್ಧ ತುಳು ಚಲನಚಿತ್ರ ನಟ ಹಾಗೂ ಹೆಸರಾಂತ ವಿ.ಜೆ ರೂಪೇಶ್.ಟಿ ಶೆಟ್ಟಿ, ಪ್ರಖ್ಯಾತ 93.5 ರೆಡ್ ಎಫ್.ಎಂ ಇದರ ರೇಡಿಯೋ ಜಾಕಿ ಆರ್.ಜೆ ಅನುರಾಗ್ ಮತ್ತು ಹೆಸರಾಂತ ವಿ.ಜೆ ಅನುಷಾ ಕುಂಬ್ಲೆ 'ಪುತ್ತೂರ ಹಬ್ಬ' ಶೋನ ನಿರೂಪಕರಾಗಿದ್ದಾರೆ.


ಸುಮಾರು 50,000 ಕಲಾರಸಿಕರು ಈ ಶೋದಲ್ಲಿ ಭಾಗವಹಿಸುವ ನಿರೀಕ್ಷೆಯಿದ್ದು ಚಿತ್ತಾಕರ್ಷಕ ಸುಡುಮದ್ದು ಪ್ರದರ್ಶನ, ಬೆಂಗಳೂರಿನ ಪ್ರಸಿದ್ಧ 'ಕ್ರೀಯೆಟಿವ್ ಸ್ಟೇಜ್ ಲೈಟಿಂಗ್ಸ್' (ಶಾಂತಲಾ) ಇವರಿಂದ ಅತ್ಯುತ್ತಮ ಧ್ವನಿ ಹಾಗೂ ಸೈಖೆಡೆಲಿಕ್ ಲೈಟಿಂಗ್ ವ್ಯವಸ್ಥೆ, ಬೆಂಗಳೂರಿನ 'ಎಲೆಕ್ಟ್ರೋ ಬ್ಲಾಸ್ಟ್' ರವರ ಪೈರೋಟೆಕ್ನಿಕ್ ಸ್ಪೆಶಲ್ ಎಫೆಕ್ಟ್ಸ್ ಹಾಗೂ 'ರೋಜ್ಪ್ ಡಿಸೈನ್ಸ್' ಇವರಿಂದ ಅತ್ಯಾಧುನಿಕ ವೇದಿಕೆ ಮತ್ತು ಮಿಂಚುವ ಸ್ಟೇಜ್ ಬ್ಯಾಕ್‌ಡ್ರಾಪ್ ಇತ್ಯಾದಿ ವಿಶೇಷಗಳು ಈ ಕಾರ್ಯಕ್ರಮವನ್ನು ಮತ್ತಷ್ಟೂ ಚಂದಗಾಣಿಸಲಿದೆ.

ಕಲಾರಸಿಕರಿಗೆ ವಿವಿಧ ರೀತಿಯ ಆಹಾರ ಉತ್ಪನ್ನಗಳು ಹಾಗೂ ಪ್ರಾಯೋಜಕರ ವಿವಿಧ ರೀತಿಯ ಸ್ಟಾಲ್‌ಗಳು ಈ ವೇದಿಕೆಯ ಸುತ್ತಮುತ್ತ ಆಯೋಜಿಸಲಾಗಿದೆ.

ಪ್ರೇಕ್ಷಕರು ವಿವಿಐಪಿ, ವಿ.ಐ.ಪಿ, ಸ್ಟ್ಯಾಂಡ್–1, ಸ್ಟ್ಯಾಂಡ್–2, ಸ್ಟ್ಯಾಂಡ್–3, ಗ್ಯಾಲರಿಗಳಲ್ಲಿ ತಮ್ಮ ಸೀಟುಗಳನ್ನು ಮುಂಗಡವಾಗಿ ಕಾದಿರಿಸುವ ಅವಕಾಶ ಲಭ್ಯವಿದೆ. ಈ ಗ್ಯಾಲರಿಗಳು ಹಾಗೂ ಕ್ರೀಡಾಂಗಣದ ಆವರಣದಲ್ಲಿ ಸೆಕ್ಯೂರಿಟಿ ವ್ಯವಸ್ಥೆಯನ್ನು ಮಾಡಲಾಗುವುದು

ಕರಾವಳಿ ಕರ್ನಾಟಕದ ಕಲಾರಸಿಕರು, ಗ್ರಾಹಕರು ಬೆಂಬಲ ಸೂಚಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಟೈಮ್ & ಟ್ರೈಡ್ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರಾದ ಸುರೇಶ್ ರಾವ್ ಕೊಕ್ಕಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**(Contact: +91 98440 45543 / +91 96115 86293)**




# ಮರಣದಂಡನೆ ನೀಡುವ ಅಧಿಕಾರ ನಮಗಿದೆಯೇ?

ಸಂಸ್ಕೃತಿಯ ಮೇಲ್ಪಂಕ್ತಿಯಲ್ಲಿ ವಿರಾಜಿಸಿ ಈ ನಿಯಮದಡಿಯಲ್ಲಿ ಸಾಧ್ಯವಿದ್ದಷ್ಟು ಮಟ್ಟಿಗೆ ಇದನ್ನು ನಿಷ್ಠೆಯಿಂದ ಉಳಿಸಿ ಬೆಳೆಸಿ ಮುಂದಿನ ಜನಾಂಗಕ್ಕೆ ಮಾದರಿ ಅನ್ನಿಸುವಲ್ಲಿ ಹೆಸರನ್ನು ಗಳಿಸುತ್ತಿರುವುದು ಭಾರತದ ವೈಶಿಷ್ಟವೆಂದೇ ಹೇಳಬೇಕು.

ಕಾಲಚಕ್ರ ಉರುಳುತ್ತಿದ್ದಂತೆ ಪರಿಸ್ಥಿತಿ ಪರಿಸರಗಳು ಪರ್ಯಾಂತರಗೊಳ್ಳುವ ಪರಿಣಾಮವಾಗಿ ಕೆಲವೊಂದು ಬದಲಾವಣೆಗಳಿಗೆ ನಾವು ಶಿರಬಾಗಿ ಮುನ್ನಡೆಯ ಬೇಕಾಗಿರುವುದೂ ನಿಜ. ಈ ನಿಟ್ಟಿನಲ್ಲಿ ವಿವೇಚಿಸುವಾಗ ನಮ್ಮ ಸಂಸ್ಕೃ ಪರಂಪರೆ ಯಾವುದೆಂಬುದನ್ನುಅರ್ಥಮಾಡಿಕೊಳ್ಳಲೇ ಬೇಕಾಗುತ್ತದೆ. ಆಗ ಮಾತ್ರ ಜನ್ಮ ಜನ್ಮಾಂತರಗಳಲ್ಲಿ ದೇವರು ಪಾಪ, ಪುಣ್ಯ ನಂಬಿಕೆ ನಡುವಳಿಕೆಗಳೇ ಮುಂತಾದ ಕರ್ಮ ಸಿದ್ಧಾಂತ ಪರಿಧಿಯೊಳಗಿನ ಹಲವಾರು ಉಪ ಹೆಸರುಗಳು ತನ್ನಿಂದ ತಾನಾಗಿ ಮೂಡಿಬರುತ್ತದೆ ಎಂಬುದು ಸರ್ವ ವಿಧಿತ. ಸಾಲದ್ದಕ್ಕೆ ನ್ಯಾಯಾಂಗ ತಕ್ಕಡಿಯಲ್ಲಿ ತೆಪ್ಪಗೆ ಮೌನಿಗಳಂತೆ ಕುಳಿತು ಅತ್ತಿತ್ತ ನೋಡುತ್ತಿರುವ ಕಾನೂನು ಕಟ್ಟಳೆಗಳೊಳಗಿನ ಐಚ್ಚಿಕ ಮರಣ (ಆತ್ಮಹತ್ಯೆ), ದಯಾಮರಣ, ಮರಣದಂಡನೆ, ಆ ಜನ್ಮ ಕಾರಾಗ್ರವಾಸ, ದೇಶಾಂತರ ವಾತ್ಸವ್ಯಗೊಳಿಸುವ ಶಿಕ್ಷೆ ಮೊದಲಾದ ಸಾಧಾರಣ ಅಸಾಧಾರಣವೆನ್ನುವಂತಹ ವಿವಿಧ ಹೇಳಿಕೆಯಿಂದ ಕರೆಯಲ್ಪಡುವ ಶಿಕ್ಷಾವಿಧಿಗಳು ನ್ಯಾಯ ಪೀಠದೆಡೆಗೆ ದೃಷ್ಟಿ ಹರಿಸುತ್ತಿರುವ ದೃಶ್ಯಗಳು ಸಿಹಿ ಕಹಿ ಎರಡನ್ನೂ ನೀಡುತ್ತಿರುವುದು ಸರಿತಾನೆ. ಇವುಗಳನ್ನೂ ಪ್ರತ್ಯೇಕಿಸಿ ಹತ್ತಿ ಹಿಸಿದು ಬಿಡಿಸಿದ ಹಾಗೆ ವಿಶ್ಲೇಷಿಸೋಣ ಎಂದರೆ ಉಹುಂ ಅದಷ್ಟು ಸುಲಭದಲ್ಲಾಗುವ ಮಾತಲ್ಲ.

ಜಾತ್ಯಾತೀತ ರಾಷ್ಟ್ರವೆಂಬ ಪ್ರಜಾ ಪ್ರಭುತ್ವದ ದೇಶದಲ್ಲಿ ನ್ಯಾಯಾಂಗ, ಶಾಸಕಾಂಗ ಸಂವಿಧಾನ ಎಂಬೆಲ್ಲಾ ಉಪ ಅಂಗಗಳಿರುವಾಗ ಅಷ್ಟು ಸುಲಭದಲ್ಲಿ ತೀರ್ಮಾನಕ್ಕೆ ಬರುವುದು ಸುಲಭವಲ್ಲ. ಚಿಂತಿಸಿ ವಿಶ್ಲೇಷಿಸಿ ಉತ್ತರಿಸಬೇಕಾಗುತ್ತದೆ. ಒಂದು ದೃಷ್ಟಿಯಿಂದ ಇದು ತುಂಬಾ ಮಹತ್ವದ್ದು ಎಂದೇಣಿಸಲೇ ಬೇಕು. ಯಾವುದೇ ತಪ್ಪುಗಳ ನಿರ್ಣಯದ ಸಂದರ್ಭ ಅಪರಾಧಿ ಎಂದು ಪರಿಗಣಿಸಿದ ಮಂದಿಗಳನ್ನು ಶಿಕ್ಷಿಸುವಾಗ ಅದರಲ್ಲೂ ಮರಣದಂಡನೆಯಂತಹ ಕಠೋರ ನಿರ್ಣಯದಲ್ಲಿ ತುಂಬಾ ಜಾಗ್ರತೆ ವಹಿಸಿ ಅಪರಾಧಿಯ ಸ್ಥಾನದಲ್ಲಿರುವ ವ್ಯಕ್ತಿಗೆ ಶಿಕ್ಷಿಸಲು ತಪ್ಪಿ ಹೋದರೂ, ತಪ್ಪು ನಿರ್ಣಯದಿಂದಾಗಿ ನಿರಪರಾಧಿ ಬಲಿಯಾಗದಿರಲಿ ಎನ್ನುತ್ತದೆ ಕಾನೂನು ಹೌದಾ? ಈ ಎಲ್ಲಾ ಮಾನದಂಡಗಳಿಂದ ವಿವೇಚಿಸಿದಾಗ ಮರಣದಂಡನೆ ಎಂಬ ತುತ್ತ ತುದಿಯ ಶಿಕ್ಷೆಯನ್ನು ಮುಂದಕ್ಕೂ ಮುಂದುವರಿಸುವುದಕ್ಕಿಂತ ಇನ್ನಿತರ ಯಾವುದೇ ಶಿಕ್ಷೆಯಾಗಿ ಬದಲಾಯಿಸುವುದು ಉತ್ತಮ ಎಂಬುದು ನನ್ನ ಅಂತರಾಳದ ಹೇಳಿಕೆ. ಇದರಿಂದ ಶಿಕ್ಷೆ ಅನುಭವಿಸುತ್ತಿರುವ ವ್ಯಕ್ತಿ ತನ್ನ ಕೃತ್ಯಕ್ಕಾಗಿ ಪಶ್ಚಾತ್ತಾಪಪಟ್ಟು ಮುಂದಕ್ಕೆ ಉತ್ತಮ ಬಾಳ್ವೆ ಸಾಗಿಸಿ ಜೀವಿಸಲು ಸಾಧ್ಯವಿದೆ ಎಂಬುದಕ್ಕೆ ನಮ್ಮ ಎಲ್ಲಾ ನಂಬಿಕೆಗಳು ಇಂಬು ಕೊಡಬಹುದು ಎಂದು ಹೇಳಲಿಚ್ಛಿಸುತ್ತೇನೆ. ಪರಿವರ್ತನೆ ಜಗದ ನಿಯಮ ಹೌದಲ್ಲವೇ ಕಾಲಾಯ ತಸ್ಮೈ ನಮಃ

***– ಕಿರಿಕ್ಕಾಡು ವನಮಾಲಾ ಕೇಶವ ಭಟ್ಟ***

## ಲೇಖಕರ ಗಮನಕ್ಕೆ

**ಹೊಸ ಕೃತಿಗಳನ್ನು ಪ್ರಕಟಿಸುವವರು ಹೃದಯವಾಹಿನಿ ಪ್ರಕಾಶನವನ್ನು ಸಂಪರ್ಕಿಸಬಹುದು. ಈಗಾಗಲೇ ಕೃತಿಗಳನ್ನು ಪ್ರಕಟಿಸಿದವರು, ಕೃತಿಯ ಕುರಿತು ಅಂಕಣದ ಪ್ರಯೋಜನ ಪಡೆಯಲಿಚ್ಛಿಸುವವರು 2 ಪ್ರತಿಗಳನ್ನು ಕಳುಹಿಸಬೇಕು.**

# ಪ್ರಶಸ್ತಿ, ಪುರಸ್ಕಾರಗಳಿಂದ ಹೊಣೆಗಾರಿಕೆ ಹೆಚ್ಚಾಗುತ್ತದೆ: ಡಾ. ಹೆಗ್ಗಡೆ



ಬೆಂಗಳೂರಿನ ವಿಶ್ವ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಪರಿಷತ್ ಆಶ್ರಯದಲ್ಲಿ ಉಜಿರೆಯಲ್ಲಿ ಎಸ್.ಡಿ.ಎಮ್. ಕಾಲೇಜಿನಲ್ಲಿ ಭಾನುವಾರ ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಿದವರಿಗೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ವಿಶ್ವ ಕನ್ನಡ ಕಣ್ಮಣಿ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಿದರು.

ಬೆಂಗಳೂರು : ಯಾವುದೇ ಆಸೆ – ಆಕಾಂಕ್ಷೆಯ ನಿರೀಕ್ಷೆ ಮಾಡದೆ, ಪ್ರತಿಫಲಾಪೇಕ್ಷೆ ಇಲ್ಲದೆ, ಪ್ರಶಂಸೆ, ಪ್ರಚಾರ ಬಯಸದೆ, ಸೇವೆ ಹಾಗೂ ಉನ್ನತ ಸಾಧನೆ ಮಾಡಿದಾಗ ಧನ್ಯತೆ, ಸಂತೋಷ ಮತ್ತು ಆತ್ಮ ತೃಪ್ತಿ ಸಿಗುತ್ತದೆ. ಪ್ರಶಸ್ತಿ, ಪುರಸ್ಕಾರಗಳಿಂದ ಹೊಣೆಗಾರಿಕೆ ಹೆಚ್ಚಾಗುತ್ತದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಹೇಳಿದರು.

ಬೆಂಗಳೂರಿನ ವಿಶ್ವ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಪರಿಷತ್ ಆಶ್ರಯದಲ್ಲಿ ಉಜಿರೆಯಲ್ಲಿ ಎಸ್.ಡಿ.ಎಮ್. ಕಾಲೇಜಿನಲ್ಲಿ ಭಾನುವಾರ ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಿದವರಿಗೆ ವಿಶ್ವ ಕನ್ನಡ ಕಣ್ಮಣಿ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ತಮ್ಮ ಸೇವೆ, ಸಾಧನೆಯನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಿದಾಗ ಸಾಧಕರು ಧನ್ಯತೆಯೊಂದಿಗೆ ಇನ್ನಷ್ಟು ಸಾಧನೆ ಮಾಡಲು ಪ್ರೇರಣೆ, ಪ್ರೋತ್ಸಾಹ ದೊರೆತಂತಾಗುತ್ತದೆ. ಸಮಾಜದಲ್ಲಿ ಯಾರೂ ಸಣ್ಣವರಲ್ಲ, ಯಾರೂ ದೊಡ್ಡವರಲ್ಲ. ಪ್ರತಿಯೊಬ್ಬರೂ ತಮ್ಮ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಲು ಅವಕಾಶವಿದೆ. ಅತಿಯಾದ ಅಹಂಕಾರವೂ ಇರಬಾರದು. ದೈನ್ಯತೆಯೂ ಸಲ್ಲದು ಎಂದು ಅವರು ಕಿವಿಮಾತು ಹೇಳಿದರು.

ಖ್ಯಾತ ಕವಿ ಡಾ. ಯಲ್ಲಪ್ಪ ಕೆ.ಕೆ. ಪುರ ವಿರಚಿತ ಪುಸ್ತಕವನ್ನು ಹೆಗ್ಗಡೆಯವರು ಬಿಡುಗಡೆಗೊಳಿಸಿ ಶುಭ ಹಾರೈಸಿದರು.

ವಿಶ್ವ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಪರಿಷತ್‌ನ ರಾಜ್ಯಾಧ್ಯಕ್ಷ ಅಗಸನೂರು ತಿಮ್ಮಪ್ಪ, ವೀರ ಗೋಪಾಲ್, ಯೋಗ ತಜ್ಞ ಡಾ. ನಿರಂಜನ ಮೂರ್ತಿ ಮತ್ತು ವೀರಗಾಸೆ ಕಲಾವಿದ ಎಮ್.ಆರ್. ಬಸಪ್ಪ ಉಪಸ್ಥಿತರಿದ್ದರು.

ಡಾ. ಯಲ್ಲಪ್ಪ ಕೆ.ಕೆ. ಪುರ ಸ್ವಾಗತಿಸಿದರು. ಅಚ್ಚು ಮುಂಡಾಜೆ ಧನ್ಯವಾದವಿತ್ತರು. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಬಿ.ಪಿ. ಸಂಪತ್ ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

ನೆಲ್ಲಿಕಾರು : ಧಾಮ ಸಂಪ್ರೋಕ್ಷಣ ಕಾರ್ಯಕ್ರಮ

ಉಜಿರೆ: ನೆಲ್ಲಿಕಾರು ಬಸದಿಯಲ್ಲಿ ಧಾಮ ಸಂಪ್ರೋಕ್ಷಣ ಅಂಗವಾಗಿ ನಾಳೆ ಮಂಗಳವಾರ ಧರ್ಮಸ್ಥಳದ ವತಿಯಿಂದ ಭಗವಾನ್ ಶ್ರೀ ಅನಂತನಾಥ ಸ್ವಾಮಿಯ ಪ್ರತಿಷ್ಠೆ, 108 ಕಲಶ ಅಭಿಷೇಕ, ಬ್ರಹ್ಮಯಕ್ಷ ದೇವರ ಪ್ರತಿಷ್ಠೆ, ಅಟ್ಟಳಿಗೆ ಅಭಿಷೇಕ, ಕಟ್ಟೆ ಪೂಜೆ ಉತ್ಸವ ಮೊದಲಾದ ಧಾರ್ಮಿಕ ವಿಧಿ–ವಿಧಾನಗಳು ನಡೆಯಲಿವೆ.

ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಮತ್ತು ಕುಟುಂಬಸ್ಥರು ಸೇವಾ ಕರ್ತೃಗಳಾಗಿ ಪೂಜೆಯಲ್ಲಿ ಭಾಗವಹಿಸುವರು. ಸಂಜೆ ನಡೆಯುವ ಧಾರ್ಮಿಕ ಸಭೆಯಲ್ಲಿ ಹೊಂಬುಜ ಜೈನ ಮಠದ ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ ಆಶೀರ್ವಚನ ನೀಡುವರು. ಸಚಿವ ಕೆ. ಅಭಯಚಂದ್ರ ಜೈನ್ ಶುಭಾಶಂಸನೆ ಮಾಡುವರು.

●

# ಪತ್ರಕರ್ತ ಹೈಮದ್‌ಗೆ ಪತ್ರಕರ್ತರ ಸಂಘದಿಂದ ಶ್ರದ್ಧಾಂಜಲಿ

ಮಂಗಳೂರು: ಮಂಗಳೂರು ಪತ್ರಕರ್ತರ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಚಾರ್ಮಾಡಿ ಅಧ್ಯಯನ ಪ್ರವಾಸದ ವೇಳೆ ಹೃದಯಾಘಾತದಿಂದ ಮೃತಪಟ್ಟ ಪತ್ರಕರ್ತ ಹೈಮದ್ ಹುಸೇನ್ ಅವರಿಗೆ ದ.ಕ.ಜಿಲ್ಲಾ ಪತ್ರಕರ್ತರ ಸಂಘ ಮತ್ತು ಮಂಗಳೂರು ಪ್ರೆಸ್‌ಕ್ಲಬ್ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಎಲ್ಲರೊಂದಿಗೆ ಅನ್ಯೋನ್ಯವಾಗಿದ್ದು ಸದಾ ಲವಲವಿಕೆಯಿಂದ ಇರುತ್ತಿದ್ದ ಹೈಮದ್ ಅವರ ಕುರಿತು ಮಾತನಾಡಿದ ಪತ್ರಕರ್ತರು ನುಡಿ ನಮನದೊಂದಿಗೆ ಪುಷ್ಪನಮನ ಸಲ್ಲಿಸುವ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜಗನ್ನಾಥ ಶೆಟ್ಟಿ ಬಾಳ, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ಇಂದಾಜೆ, ಮಂಗಳೂರು ಪ್ರೆಸ್ ಕ್ಲಬ್ ಪ್ರಧಾನ ಕಾರ್ಯದರ್ಶಿ ಗುರುವಪ್ಪ ಎನ್.ಟಿ.ಬಾಳೇಪುಣಿ, ಜಿಲ್ಲಾ ವಾರ್ತಾಧಿಕಾರಿ ಬಿ.ಎ.ಖಾದರ್ ಶಾ, ಹಿರಿಯ ಪತ್ರಕರ್ತರಾದ ಕೆ.ಆನಂದ ಶೆಟ್ಟಿ, ಸುರೇಶ್ ಬೆಳಗಜೆ, ಪಿ.ಬಿ.ಹರೀಶ್ ರೈ, ಬಿ.ಎನ್.ಪುಷ್ಪರಾಜ್, ಬಿ.ರವೀಂದ್ರ ಶೆಟ್ಟಿ, ಮುಹಮ್ಮದ್ ಆರೀಫ್, ವೇಣುವಿನೋದ್ ಕೆ.ಎಸ್, ಆರ್.ಸಿ.ಭಟ್, ಬಾಲಕೃಷ್ಣ ಎಂ.ಜಿ., ಹರ್ಷ ರಾವ್, ರವಿಪ್ರಸಾದ್



ಕಮಲ, ಸತ್ಯಾ ಕೆ, ಎಸ್.ವಿ.ಸುಬ್ರಹ್ಮಣ್ಯ, ವಿಜಯ ಕೋಟ್ಯಾನ್ ಪಡು, ನರಸಿಂಹಮೂರ್ತಿ, ಪ್ರಕಾಶ್ ಪಾಂಡೇಶ್ವರ, ಕಲಾವಿದ ದಿನೇಶ್ ಹೊಳ್ಳ, ಉಪಸ್ಥಿತರಿದ್ದರು.




# 'ನೇಸರು' ಮಾಸಿಕ ದ ಜಾಗತಿಕ ಕನ್ನಡ ಕವನ ಸ್ಪರ್ಧೆ ವಿಜೇತರು

ಮೈಸೂರು ಅಸೋಸಿಯೇಷನ್ ಮುಂಬಯಿ ಇದರ ಮುಖವಾಣಿ 'ನೇಸರು' ಮಾಸಿಕವು ನಡೆಸಿದ ಜಾಗತಿಕ ಕನ್ನಡ ಕವನ ಸ್ಪರ್ಧೆಯಲ್ಲಿ ಕೆಳಕಾಣಿಸಿದವರು ಸ್ಪರ್ಧಿಗಳು ವಿಜೇತರಾಗಿರುವರು.

ಪ್ರಥಮ: ಚೈತ್ರಿಕಾ ಶ್ರೀಧರ್ ಹೆಗಡೆ, ಹಾರ್ಸಿಕಟ್ಟಾ, ಸಿದ್ದಾಪುರ (ಕವನ: ದಣಪೆಯ ಈಚೆ ಬದಿಗೆ)

ದ್ವಿತೀಯ: ಛಾಯಾ ಭಗವತಿ, ವಿಜಯನಗರ, ಬೆಂಗಳೂರು (ಕವನ: ಅಪರೂಪಕೊಮ್ಮೊಮ್ಮೆ)

ತೃತೀಯ: ವೀಣಾ ಬಡಿಗೇರ್, ಬೆಳಗಾವಿ (ಕವನ: ಹೆಣ್ಣಾಗಬೇಕು)

ಪ್ರೋತ್ಸಾಹ ಬಹುಮಾನ :

ಗಣಪತಿ ದಿವಾಣ, ಅಂಬಲಪಾಡಿ, ಉಡುಪಿ (ಕವನ: ನಾನೊಬ್ಬ ಇದ್ದೇನೆ)

ರಾಮಚಂದ್ರ ಪೈ, ಮೂಡುಬಿದಿರೆ, ದ.ಕ. ಜಿಲ್ಲೆ (ಕವನ: ಎಲೆ ಎಲೆಯ ಎದೆಯ ದನಿ)

ತೀರ್ಪುಗಾರರುಗಳಾಗಿ ಬಿ.ಎಸ್. ಕುರ್ಕಾಲ್ (ಖ್ಯಾತ ಕವಿ, ಮುಂಬಯಿ) ಹಾಗೂ ಡಾ। ಹೆಚ್.ಎಸ್ ವೆಂಕಟೇಶ್ ಮೂರ್ತಿ (ಖ್ಯಾತ ಕವಿ, ಬೆಂಗಳೂರು) ಸ್ಪರ್ಧಾ ತೀರ್ಪು ನೀಡಿದ್ದರು ಎಂದು ಮೈಸೂರು ಅಸೋಸಿಯೇಷನ್‌ನ ಅಧ್ಯಕ್ಷೆ ಕೆ. ಕಮಲ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಎಂಥ ಮಾತು....!!!

ತಿಂಗಳ ಮೊದಲಲ್ಲಿ salary
ತಿಂಗಳ ಕೊನೆಯಲ್ಲಿ ಸಾಲ – ರೀ!

******

30 ವರ್ಷದ ದಾಂಪತ್ಯದಲ್ಲಿ ಆಕೆ ಎಂದಿಗೂ ಗಂಡನನ್ನು ಬಯ್ಯಲಿಲ್ಲ ಏಕೆಂದರೆ ಪ್ರಾಣಿದಯಾ ಸಂಘದ ಸದಸ್ಯೆಯಾಗಿದ್ದಳು!!

******

ಅನೇಕರು ಹಣ ಗಳಿಸಲು ಆರೋಗ್ಯ ಹಾಳು ಮಾಡಿಕೊಳ್ಳುತ್ತಾರೆ, ನಂತರ ಆರೋಗ್ಯ ಸುಧಾರಿಸಿಕೊಳ್ಳಲು ಹಣ ಖರ್ಚು ಮಾಡುತ್ತಾರೆ.

******

ದೇವಸ್ಥಾನದಲ್ಲಿ ಎಲ್ಲ ಗಂಡಂದಿರೂ ಹೆಂಡತಿ ಹೆಸರಿನಲ್ಲೇ ಮಂಗಳಾರತಿ ಮಾಡಿಸುತ್ತಾರೆ. ಏಕೆಂದರೆ ಅವರಿಗೆ ಮನೆಯಲ್ಲಿಯೇ ಆಗಿರುತ್ತದೆ.

******

50 kg ಅಕ್ಕಿ ಹೊರುವ ಒಬ್ಬ ಬಡವನಿಗೆ ಅದನ್ನು ಖರೀದಿಸುವಷ್ಟು ಶಕ್ತಿ ಇರೋಲ್ಲ. ಆದರೆ ಅದನ್ನು ಖರೀದಿಸುವ ಶ್ರೀಮಂತನಿಗೆ ಅದನ್ನು ಹೊರುವ ಶಕ್ತಿ ಇರೋಲ್ಲ ಎಂಥಾ ವಿಚಿತ್ರ ಅಲ್ವಾ !

******

ಕಾಲೇಜು ಪರೀಕ್ಷೆಯಲ್ಲಿ
ಕಾಪಿ ಹೊಡಿತಾರೆ
ಪಾಸ್ ಆಗ್ತಾರೆ.
ವಧು ಪರೀಕ್ಷೆಯಲ್ಲಿ ಕಾಫೀ ಕುಡೀತಾರೆ
ವಾ–ಪಾಸ್ ಹೋಗ್ತಾರೆ.

******

ಪ್ರತೀ ಪುರುಷನೂ ತನ್ನ ಹೆಂಡತಿ ಬುದ್ಧಿವಂತೆಯಗಿರಬೇಕು, ಸುಂದರಿಯಾಗಿರಬೇಕು ಎಂದು ಬಯಸುತ್ತಾನೆ. ಆದರೆ ಕಾಯ್ದೆ ಪ್ರಕಾರ ಪ್ರಕಾರ ಇಬ್ಬರು ಮಡದಿಯರನ್ನು ಹೊಂದುವಂತಿಲ್ಲ

******

ಸುರೇಶ ಮತ್ತು ರಮೇಶ ಇಬ್ಬರು ಗೆಳೆಯರು ಒಂದು ದ್ವೀಪದಲ್ಲಿ ವಾಸಿಸುತ್ತಿದ್ದರು. ಇಬ್ಬರಿಗೂ ಸಂಜೆಯಾಯಿತೆಂದರೆ ಸ್ವಲ್ಪ ಸಾರಾಯಿ ಶೀಷೆಯ ಮೇಲೆ ಒಲವು ಉಂಟಾಗುತ್ತಿತ್ತು ಆದ ಕಾರಣ ತಾವಿರುವದ್ವೀಪ ಇನ್ನೊಂದು ಭೂಪ್ರದೇಶಕ್ಕೆ ದೋಣಿಯ ಮೂಲಕ ಸಾಗುತ್ತಿದ್ದರು.. ಎಂದಿನಂತೆಯೇ ದೋಣಿಯಲ್ಲಿ ಬಂದ ಇಬ್ಬರು ತಮ್ಮ ದೋಣಿಯನ್ನು ನದಿ ದಂಡೆಯಗೂಟಕ್ಕೆ ಕಟ್ಟಿ ಶರಾಬು ಅಂಗಡಿ ಕಡೆ ಹೆಜ್ಜೆ ಹಾಕುತ್ತಾರೆ. ಊರಿನ ವಿಚಾರಗಳನ್ನು ಮಾತನಾಡುತ್ತಾ ನಿಧಾನವಾಗಿ ಶರಾಬು ಬಾಟಲಿಯನ್ನು ಏರಿಸುತ್ತಾರೆ, ರಾತ್ರಿಯಾದದ್ದೇ ಗೊತ್ತಾಗಲಿಲ್ಲ. ರಾತ್ರಿಯಾದರೂ ಪರವಾಗಿಲ್ಲ ಮನೆಸೇರೋಣವೆಂದು ಬೇಗ ಹೆಜ್ಜೆ ಹಾಕುತ್ತಾ ದೋಣಿಯ ಕಡೆನಡೆದರು. ಸುರೇಶನಿಗೆ ನಶೆ ಅತಿಯಾದ್ದರಿಂದ ರಮೇಶನು ದೋಣಿಯಲ್ಲಿ ಕುಳಿತು ಕುಡಿದು ನಶೆ ಏರಿದ್ದರಿಂದ ನಿಧಾನವಾಗಿ ಹುಟ್ಟುಹಾಕಲು ಆರಂಭಿಸಿದ ರಮೇಶ ಆಯಾಸ ಕಳೆಯಲು ಹಾಡೊಂದಹಾಡುತ್ತಾ ಮುಂದುವರೆಸುತ್ತಿದ್ದನು, ಕೆಲವೇ ಗಂಟೆಗಳಲ್ಲಿ ತಲುಪಬೇಕಾದ ದೂರ ಬೆಳಿಗ್ಗೆಯಾದರೂ ತಲುಪಲೇ ಇಲ್ಲ ! ನಶೆ ಇಳಿದಿತ್ತು ಹಿಂತಿರುಗಿ ನೋಡಿದಾಗ ಗೂಟಕ್ಕೆ ಕಟ್ಟಿದ ಹಗ್ಗ ಬಿಚ್ಚಿರಲೇ ಇಲ್ಲ!!!

# ಮೊಡೇಲ್ ಬ್ಯಾಂಕ್ ಲಿಮಿಟೆಡ್ :ಶತಮಾನೋತ್ಸವ ಸಂಭ್ರಮ


ಆಲ್ಬರ್ಟ್ ಡಬ್ಲ್ಯೂ.ಡಿ'ಸೋಜಾ, ಪಾಂಗ್ಳಾ


ವಿಲಿಯಂ ಜೆ.ಸಿಕ್ವೇರಾ , ಮುಲುಂಡ್

ಮುಂಬಯಿ, ಎ.07: ಕರ್ನಾಟಕ ರಾಜ್ಯದ ಕರಾವಳಿ ಮೂಲದ ರೋಮನ್ ಕೆಥೋಲಿಕ್ ಕ್ರೈಸ್ತ ಸಮುದಾಯದ ಮುಂದಾಳುಗಳು ಸುಮಾರು 100 ವರ್ಷಗಳ ಹಿಂದೆ ದಿ. ಮೆಂಗ್ಳೂರಿಯ ಕೆಥೋಲಿಕ್ ಕೋ.ಆಪರೇಟಿವ್ ಕ್ರೆಡಿಟ್ ಸೊಸೈಟಿ ನಿಯಮಿತ ಎಂದಾಗಿಸಿ ಸ್ಥಾಪಿಸಿ ಪ್ರಸ್ತುತ ಮೊಡೇಲ್ ಕೋ.ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಎಂದು ನಾಮಕರಿಸಲ್ಪಟ್ಟ ಪ್ರಸ್ತುತ ಮೊಡೇಲ್ ಕೋ.ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ನಾಮಾಂಕಿತ ಮೊಡೇಲ್ ಬ್ಯಾಂಕ್‌ನ ನೂತನ ಕಾರ್ಯಾಧ್ಯಕ್ಷರಾಗಿ ಆಲ್ಬರ್ಟ್ ಡಬ್ಲ್ಯೂ.ಡಿ'ಸೋಜಾ ಪಾಂಗ್ಳಾ ಪುನರಾಯ್ಕೆ ಆಗಿದ್ದಾರೆ.

ಇತ್ತೀಚೆಗೆ ನಡೆದ ಸಭೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆದಿದ್ದು, ಉಪ ಕಾರ್ಯಾಧ್ಯಕ್ಷರಾಗಿ ವಿಲಿಯಂ ಜೆ.ಸಿಕ್ವೇರಾ ಮುಲುಂಡ್, ನಿರ್ದೇಶಕರಾಗಿ ವಿನ್ಸೆಂಟ್ ಮಥಾಯಸ್, ಶ್ರೀಮತಿ ಬೆನೆಡಿಕ್ಟಾ ರೆಬೆಲ್ಲೋ, ಶ್ರೀಮತಿ ಮಾರಿಟಾ ಡಿ'ಮೆಲ್ಲೋ, ಅಬ್ರಹಾಂ ಕ್ಲೇಮೆಂಟ್ ಲೊಬೋ, ತೋಮಸ್ ಡಿ.ಲೋಬೊ, ಪೌಲ್ ನಝರೆತ್, ಸಂಜಯ್ ಶಿಂಧೆ, ನ್ಯಾ। ಪಿಯುಸ್ ವಾಸ್, ಲಾರೇನ್ಸ್ ಡಿ'ಸೋಜಾ ಮುಲುಂಡ್, ಜೆರಾಲ್ಡ್ ಕರ್ಡೋಜಾ, ಆ್ಯನ್ಸಿ ಎಸ್.ಡಿ'ಸೋಜಾ ಹಾಗೂ ರೋನಾಲ್ಡ್ ಹೆಚ್.ಮೆಂಡೋನ್ಸಾ, ಜೋರ್ಜ್ ಕಾಸ್ತೇಲಿನೋ (ಸಹ ನಿರ್ದೇಶಕರು), ಅವರನ್ನು ಆಯ್ಕೆಗೊಳಿಸಲಾಗಿದೆ.

ಬ್ಯಾಂಕ್‌ನ ಸ್ಥಾಪಕಾಧ್ಯಕ್ಷ ಜೋನ್ ಡಿ'ಸಿಲ್ವಾ ಅವರ ದಕ್ಷ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಬ್ಯಾಂಕ್ ಶತಮಾನೋತ್ಸವ ಸಂಭ್ರಮದ ಸಮಾಪ್ತಿಯಲ್ಲಿದ್ದು ದ್ವಿಶತಕದತ್ತ ದಾಪು ಕಾಲಿರಿಸುತ್ತಿದೆ. ಬ್ಯಾಂಕ್‌ನ ಮಹಾ ಪ್ರಬಂಧಕ ಮತ್ತು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿ ವಿಲಿಯಂ ಎಲ್.ಡಿ'ಸೋಜಾ ಹಾಗೂ ಹೆಚ್ಚುವರಿ ಪ್ರಧಾನ ಪ್ರಬಂಧಕ ಹರೋಲ್ಡ್ ಎಂ.ಸೆರಾವೋ ಸೇವಾ ನಿರತರಾಗಿದ್ದಾರೆ.

ದಿ.ಮಹಾರಾಷ್ಟ್ರ ಸ್ಟೇಟ್ ಕೋ.ಆಪರೇಟಿವ್ ಬ್ಯಾಂಕ್'ಸ್ ಅಸೋಸಿಯೇಶನ್ ಲಿಮಿಟೆಡ್ ಮುಂಬಯಿ ಇದರ 2014–2015ರ ಹಣಕಾಸು ಸಾಲಿನಲ್ಲಿ 2014–2015ರ ಹಣಕಾಸು ಸಾಲಿನ ರೂಪಾಯಿ 1,500 ಮೊತ್ತದೊಳಗಿನ ಠೇವಣಿ ಹೊಂದಿದ ಸಹಕಾರಿ ಬ್ಯಾಂಕುಗಳಲ್ಲಿ ಮೊಡೇಲ್ ಬ್ಯಾಂಕ್ 'ಉತ್ಕೃಷ್ಟ ಬ್ಯಾಂಕ್' ಆಗಿ ಪ್ರಪ್ರಥಮ ಸ್ಥಾನಕ್ಕೆ ಭಾಜನರಾಗಿದ್ದು, 2015ರ ಆಗಸ್ಟ್‌ನಲ್ಲಿ ದಿ.ಬೃಹನ್ಮುಂಬಯಿ ನಗರಿ ಸಹಕಾರಿ ಬ್ಯಾಂಕ್'ಸ್ ಅಸೋಸಿಯೇಶನ್ ಲಿಮಿಟೆಡ್ ಮುಂಬಯಿ ಸಂಸ್ಥೆಯು ತೃತೀಯ ಸ್ಥಾನದೊಂದಿಗೆ 'ಶ್ರೇಷ್ಠ ಬ್ಯಾಂಕ್' ಪುರಸ್ಕಾರ ಪ್ರದಾನಿಸಿ ಗೌರವಿಸಿತ್ತು.

ಶತಮಾನದ ಸೇವೆ ಶ್ರೇಷ್ಠತೆ ತೋರುವ ಸಾಧನೆ ಈ ಬ್ಯಾಂಕ್ ಸಾಧಿಸಿದ್ದು, ಸಾರ್ವಜನಿಕ ಸೇವೆಯಲ್ಲಿ ವಿಶ್ವಾಸ ಬೆಳೆಸಿ ಮುನ್ನಡೆದು ಇದೀಗ ಶತಮಾನದ ಸೇವೆ ಫಲಪ್ರದವಾಗಿ ಪೂರೈಸಿದೆ. ಇದೇ ಎ.26ನೇ ಮಂಗಳವಾರ ಕಲೀನಾದಲ್ಲಿ

ಬ್ಯಾಂಕ್ ಶತಮಾನೋತ್ಸ ಸಂಭ್ರಮದ ಸಮಾರೋಪ ಸಮಾರಂಭ ಆಯೋಜಿಸಿದೆ. ಉಜ್ವಲ ಭವಿಷ್ಯದೊಂದಿಗೆ ದ್ವಿಶತಕದತ್ತ ದಾಪು ಕಾಲಿರಿಸುತ್ತಿರುವ ಬ್ಯಾಂಕ್‌ನ ಸರ್ವೋನ್ನತಿಗೆ ಬ್ಯಾಂಕ್ ಸಂಸ್ಥಾಪಕರ ದುರದೃಷ್ಟಿತ್ವ, ಶೇರುದಾರರು ಮತ್ತು ಅಪಾರ ಗ್ರಾಹಕರು ಹಾಗೂ ಹಿತೈಷಿಗಳ ಸಹಯೋಗವೇ ಕಾರಣ ಎಂದು ಕಾರ್ಯಾಧ್ಯಕ್ಷ ಆಲ್ಬರ್ಟ್ ಡಿ'ಸೋಜಾ ತಿಳಿಸಿದ್ದಾರೆ.

ಚಿತ್ರ ; ವರದಿ : ರೋನ್ಸ್ ಬಂಟ್ವಾಳ್

# ಯಕ್ಷಧ್ರುವ ಪಟ್ಲ ಸಂಭ್ರಮ




ಮಂಗಳೂರು: ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ವತಿಯಿಂದ ಮೇ 22ರಂದು ಭಾನುವಾರ ಬೆಳಗ್ಗೆ 9ಗಂಟೆಯಿಂದ ರಾತ್ರಿ 9ಗಂಟೆಯವರೆಗೆ 'ಯಕ್ಷ ಧ್ರುವ ಪಟ್ಲ ಸಂಭ್ರಮ' ಕಾರ್ಯಕ್ರಮ ನಡೆಯಲಿದೆ.


ಮೇ 22ರಂದು ಪುರಭವನದಲ್ಲಿ ಬೆಳಿಗ್ಗೆ ರಕ್ತದಾನ ಶಿಬಿರ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದ್ದು, ಕಲಾವಿದರಿಗೆ ವೈದ್ಯಕೀಯ ತಪಾಸಣಾ ಶಿಬಿರ ನಡೆಯಲಿದೆ. ಹದಿನೈದು ಮಂದಿ ಆಸಕ್ತ ಕಲಾವಿದರಿಗೆ ತಲಾ 50 ಸಾವಿರ ರೂಪಾಯಿ ಗೌರವಧನ, ಓರ್ವ ಅರ್ಹ ಕಲಾವಿದನಿಗೆ ಒಂದು ಲಕ್ಷ ರೂಪಾಯಿ ಜತೆಗೆ ಪಟ್ಲ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಪಟ್ಲ ಫೌಂಡೇಶನ್ ಟ್ರಸ್ಟ್‌ನ ಅಧ್ಯಕ್ಷ ಸತೀಶ್ ಶೆಟ್ಟಿಪಟ್ಲ ಅವರು ಬಲ್ಲಾಲ್‌ಬಾಗ್‌ನಲ್ಲಿರುವ ಪತ್ತುಮುಡಿ ಸೌಧದಲ್ಲಿ ಆಯೋಜಿಸಲಾದ ಟ್ರಸ್ಟ್‌ನ ಸಭೆಯಲ್ಲಿ ತಿಳಿಸಿದರು.ಸಮಾರಂಭದಲ್ಲಿ ಕಲಾವಿದರಿಗೆ ಅಪಘಾತ ವಿಮಾ ಯೋಜನೆಯನ್ನು ಜಾರಿಗೊಳಿಸಲಾಗುವುದು. ಅಲ್ಲದೆ ಸಮಾರಂಭದಲ್ಲಿ ಯಕ್ಷಗಾನ ವೈಭವ, ತಾಳಮದ್ದಳೆ, ಬಯಲಾಟ ರಾಧಾವಿಲಾಸ ಯಕ್ಷಗಾನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಜತೆಗೆ ಟ್ರಸ್ಟ್‌ಗೆ ಒಂದು ಲಕ್ಷ ಸದಸ್ಯರನ್ನು ನೋಂದಾಯಿಸುವ ಗುರಿ ಇದೆ ಎಂದು ಸತೀಶ್ ಶೆಟ್ಟಿ ಪಟ್ಲ ತಿಳಿಸಿದರು.ಸಭೆಯಲ್ಲಿ ಟ್ರಸ್ಟ್‌ನ ಗೌರವಾಧ್ಯಕ್ಷ ಕಲ್ಲಾಡಿ ದೇವಿಪ್ರಸಾದ್ ಶೆಟ್ಟಿ ಸಲಹೆ ಸೂಚನೆಗಳನ್ನು ನೀಡಿದರು. ವೇದಿಕೆಯಲ್ಲಿ ಉಪಾಧ್ಯಕ್ಷರಾದ ಸುಧೀರ್‌ಭಟ್ ಎಕ್ಕಾರ್, ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ ಕೆ. ಭಂಡಾರಿ, ಸಂಘಟನಾ ಕಾರ್ಯದರ್ಶಿಗಳಾದ ಕದ್ರಿ ನವನೀತ ಶೆಟ್ಟಿ, ಜಗನ್ನಾಥ ಶೆಟ್ಟಿ ಬಾಳ, ಕೋಶಾಧಿಕಾರಿ ಸಿ.ಎ. ಸುದೇಶ್ ರೈ ಮೊದಲಾದವರು ಉಪಸ್ಥಿತರಿದ್ದರು.

## ಹೆಣ್ಣು ಮಕ್ಕಳ ಹದಿಹರೆಯದ ಸಮಸ್ಯೆಗಳು ಮತ್ತು ಪರಿಹಾರ

ಸುರತ್ಕಲ್ : ಶ್ರೀ ನಾರಾಯಣ ಗುರು ಶಿಕ್ಷಣ ಸಂಸ್ಥೆಯಲ್ಲಿ ದಿನಾಂಕ 29.3.2016 ರಂದು ವಿದ್ಯಾರ್ಥಿನಿಯರಿಗೆ ಹೆಣ್ಣು ಮಕ್ಕಳ ಹದಿಹರೆಯದ ಸಮಸ್ಯೆಗಳು ಮತ್ತು ಪರಿಹಾರದ ಬಗ್ಗೆ ಡಾ। ಗೀತಾ ಶರತ್ – ಹೋಮಿಯೋಪತಿ ಇವರಿಂದ ಕಾರ್ಯಾಗಾರವು ನೆರವೇರಿತು. ಜೆ.ಸಿ.ಐ ಗಣೇಶ್‌ಪುರ ಇವರ ಆಶ್ರಯದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಜೆ.ಸಿ.ಐ ಗಣೇಶ್‌ಪುರದ ಶ್ರೀ. ಶ್ರೀಶ ಮತ್ತು ಲತಾ ಕುಮಾರಿಯವರು, ಸಂಸ್ಥೆಯ ಅಧ್ಯಕ್ಷರಾದ ಶ್ರೀ.ಪಿ.ಸಾದುಪೂಜಾರಿ, ಆಂಗ್ಲಮಾಧ್ಯಮ ಪ್ರೌಢಶಾಲಾ ಮುಖ್ಯೋಪಾಧ್ಯಾಯಿನಿಯಾದ ಜ್ಯೋತಿ ಎ.ಕೆ.ಹಾಗು ಶಿಕ್ಷಕವೃಂದದವರು ಉಪಸ್ಥಿತರಿದ್ದರು. ಶ್ರೀಮತಿ ವಿನುತ ಕೆ.ಆರ್. ಕಾರ್ಯಕ್ರಮವನ್ನು ಸ್ವಾಗತಿಸಿ, ನಿರೂಪಿಸಿ ವಂದನಾರ್ಪಣೆಗೈದರು.

# ಕೃತಿಯ ಕುರಿತು

# ಸಾವಿರದ ಬಿಸಿಲು–ಬೆಳದಿಂಗಳು




ಕೃತಿ : ಆತ್ಮಕಥನ
"ಸಾವಿರದ ಬಿಸಿಲು ಬೆಳದಿಂಗಳು"
ಡಾ. ಸುನೀತಾ ಎಂ. ಶೆಟ್ಟಿ
ಪ್ರ : ಸನ್ನಿಧಿ ಪ್ರಕಾಶ
ಸಂಪರ್ಕ : 09870384040

ಎಲ್ಲೋ ಒಂದು ಹಳ್ಳಿ ಮೂಲೆಯಿಂದ ಹೊರಟು, ತನ್ನ ಭವಿಷ್ಯದ ಹೆಜ್ಜೆ ಗುರುತುಗಳನ್ನು ಹುಡುಕುತ್ತ ದೂರದ ಮುಂಬಯಿ ನಗರವನ್ನು ಸೇರಿ, ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಅಧ್ಯಪನ ಮತ್ತು ಸಮಾಜಪರ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡು, ತಮ್ಮ ಪ್ರಬದ್ಧ ಚಿಂತನೆಗಳಿಂದ ಕೂಡಿದ ಹತ್ತು ಹಲವು ಮೌಲಿಕ ಸೃಜನ ಶೀಲ ಕೃತಿಗಳನ್ನು ಬೆಳಕಿಗೆ ತಂದು ಮುಂಬಯಿಯ ಕನ್ನಡ ಸಾರಸ್ವತ ಲೋಕದ ಮಡಿಲಿಗೆ ಪ್ರತಿಷ್ಠಿತ ದಾನ ಚಿಂತಾಮಣಿ ಅತ್ತಿ ಮ* ಪ್ರಶಸ್ತಿಯನ್ನು ಅರ್ಪಿಸಿ (ಪ್ರಶಸ್ತಿಯ ನಗದು ಒಂದು ಲಕ್ಷ ರೂಪ್ಯಾ ಜತೆಗೆ ಇನ್ನೂ 75000/ ಮೊತ್ತವನ್ನು ಸೇರಿಸಿ ಕರ್ನಾಟಕ ಸಂಘ ಮುಂಬಯಿ ಧತ್ತಿ ನಿಧಿಗೆ ನೀಡಿ ತನ್ನ ಹೃದಯ ಶ್ರೀ ಮಂತಿಕೆಯನ್ನು ಮೆರೆದ ಡಾ. ಶ್ರೀಮತಿ ಸುನೀತಾ ಎಂ ಶೆಟ್ಟಿ ಅವರು ಮುಂಬಯಿಯ ಓದಗಿ ಅಪರೂಪದ ತೇಜಸ್ವಿ ಮಹಿಳೆ! ಇವರ ಪ್ರಸ್ತುತ (2016) ಬೆಳಕು ಕಂಡ ಸಾವಿರದ ಬಿಸಿಲು ಬೆಳದಿಂಗಳು ಒಂದು ವಿನೂತನ ವಿನ್ಯಾಸದ ಆತ್ಮಕಥನ ಇದರ ಅವಲೋಕನವೇ ಒಂದು ರೋಚಕ ಅನುಭವ. ಡಾ. ಸುನೀತಕ್ಕ ಹುಚ್ಚಾ ಪಚ್ಚೆ ಹಸಿರಿನ ಗ್ರಾಮೀಣ ಪ್ರತಿಭೆ ತನ್ನ ಹಳ್ಳಿಯ ಪ್ರಾಥಮಿಕ ನೆಲೆಯಿಂದಲೂ ಆಕೆ ತನ್ನ ಹಳ್ಳಿಯಲ್ಲಿ ಪ್ರಾಥಮಿಕ ನೆಲೆಯಿಂದಲೂ ಆಕೆ ಜಾಣರಜಾಣೆ ಎಂದೆನಿಸಿದ ದಿಟ್ಟ ಹುಡುಗಿ. ಕುಲೀನ ರೈತಾಪಿ ಬಂಟರ ಮನೆಯಲ್ಲಿ ಜನಿಸಿದ (27.6.1932) ಅವರು ಪರಂಪರೆಯ ಪ್ರಜ್ಞೆಯನ್ನು ಕಳೆದುಕೊಳ್ಳದ, ಪರಿಸರದ ಪ್ರಜ್ಞೆಯನ್ನು ರೂಢಿಸಿಕೊಂಡೇ ಸೃಜನ ಶೀಲ ಸಾಹಿತಿಯಾಗಿ ರೂಪುಗೊಂಡು ಬಂದವರು.

ಡಾ. ಸುನೀತ ಎಂ. ಶೆಟ್ಟಿ ಅವರ ಮೇಲೆ ತಾನು ಹುಟ್ಟಿದ ಕರಾವಳಿಯ ಗ್ರಾಮೀಣ ಪರಿಸರ ಉಷ್ಣ ಗಾಢ ಪರಿಣಾಮ ಬೀರಿದೆ ಎಂಬುದರ ಅರಿವಾಗ ಬೇಕಾದರೆ ಅವರ ಆತ್ಮಕಥನದ ಮೊದಲ ಅಧ್ಯಾಯವನ್ನೊಮ್ಮೆ ಓದಬೇಕು.

ದಕ್ಷಿಣ ಕನ್ನಡ ಜಿಲ್ಲೆಯ ಕಳವಾರು ಎಂಬ ಪುಟ್ಟ ಗ್ರಾಮನನ್ನೂರು ನನ್ನದು ಕೃಷಿಕ ಕುಟುಂಬ ಉಣಿಲು ಸುಗ್ಗಿ, ಕೊಳಕೆ ಹೀಗೆ ವರ್ಷದಲ್ಲಿ ಮೂರು ಬೆಳೆಯೂ ಸಮೃದ್ಧವಾಗಿ ನೀರುಣ್ಣುವ ಫಲವತ್ತಾದ ಮಣ್ಣು! ಮುಂಗಾರು ಮಳೆಯ ಅರ್ಭಟವು ಹೆಚ್ಚಿದ ದಿನಗಳಲ್ಲಿ ಊಣ್ಣೆ ಬಿರುವ ನೆರೆ ನೀರು ತೋಡುಗಳನ್ನು ಎತ್ತಿ ಎತ್ತಿ ಬಯಲಿಗೆ ಹಾಸಿದಾಗಲೆಲ್ಲ ಗದ್ದೆಗಳ ಹುಣಿಗಳಲ್ಲಿ ಜಲಕವಾಡುತ್ತ ಉದ್ದಕ್ಕೂ ಜಲರಾಶಿ ವ್ಯಾಪಿಸಿಕೊಂಡು ಆಚೆ ಬಯಲಿನ ಈಶ್ವರ ದೇವಸ್ಥಾನಕ್ಕೆ ದಾರಿಯೇ ಇಲ್ಲದಂತೆ ಮಾಡಿ ಮೂರು ದಿನಗಳ ಕಾಲ ಸುಖವಾಗಿ ನಿದ್ರಿಸಿ ಬಿಡುತ್ತಿತ್ತು. ಗುಡುಗು ಮಿಂಚಿನ ಅಬ್ಬರ ವಂತೂ ಹೇಳ ತೀರದಷ್ಟು ಆಗನನ್ನ ತಾಯಿ ಕತ್ತಿ ಯನ್ನು ಅಂಗಳಕ್ಕೆ ಬಿಸಾಡಿ ಬಿಡುತ್ತಿದ್ದರು. ರಾತ್ರಿಯಲ್ಲೂ ಮನೆಯ ಬಾಗಿಲು ಮುಚ್ಚದೇನೇ ಹೊರ ಚಾವಡಿಯಲ್ಲಿ ಮಲಗಿ ಕೊಳ್ಳುತ್ತಿದ್ದ ನಮಗೆ ಈ ಮಿಂಚು–ಸಿಡಿಲು ತಟ್ಟಲಾರದು. ಹೊರಗೆ ಅಂಗಣದಲ್ಲಿ ಕತ್ತಿ ಇದೆಯಲ್ಲ! ಎಂಬ ಭರವಸೆ ಇತ್ತು.." ಎಂಬ ವರ್ಣನೆಗಳನ್ನು ಓದುವಾಗ ನಮಗೂ ಅಂದಿನ ನಮ್ಮ ಬಾಲ್ಯದ ದಿನಗಳು ಕಾಡಿತೊಡಗುತ್ತದೆ. ಅವರು ಮುಂದುವರಿದು ಬರೆಯುತ್ತಾ" ನಮ್ಮ ಹೆಣ್ಣು ಮಗಳು ಮದುವೆಯಾಗದೆ ತೀರಿಕೊಂಡರೇ ಸತ್ತವರ ಮದುವೆ (ಕುತಿಮದ್ಮೆ) ಎಂಬ ಪದ್ಧತಿಯನ್ನು ಹಳ್ಳಿಗಳಲ್ಲಿ ನೆರವೇರಿಸುವ ಕ್ರಮವಿದೆ. ಪ್ರಾಯಕ್ಕೆ ಬಂದಿರದ ಹೆಣ್ಣು ಮಗಳಾದರೆ, ಬೇರೆಡೆಯಲ್ಲಿ ಪ್ರಾಯಕ್ಕೆ ಬಾರದ ಹುಡುಗನು ಮರಣ ಹೊಂದಿರುವ ವಿಚಾರತಿಳಿದು ಸಂಬಂಧ ಕುದುರಿಸಲಾಗುತ್ತದೆ. ಒಂದು ಪಕ್ಷ ಪ್ರಾಯಕ್ಕೆ ಬಂದಿರುವ ಹೆಣ್ಣುಮಗಳಾದರೆ ಅಂಥ ಅವಿವಾಹಿತ ಗಂಡನ್ನೇ ಆಯ್ಕೆ ಮಾಡಲಾಗುತ್ತದೆ. ಕರಿಮಣಿ, ಉಂಗುರ, ಕಾಲುಂಗುರ ಮಾಡಿಸಿ ವಾರ್ಷಿಕ ತಿಥಿಯ ದಿವಸವೇ (ಅಗೆಲ್) ಮಾಡಿ ಮದುವೆ ಮುಗಿಸುತ್ತಾರೆ... ನಮ್ಮ ಮನೆಯಲ್ಲಿ ನಡೆದ ಇಂಥ ಸತ್ತವಳ ಮದುವೆಗೆ ಸಂಬಂದಿಸಿದ ಬೀಗರು ವರ್ಷಕ್ಕೊಮ್ಮೆ ಯಾದರೂ ಪರಸ್ಪರ ಬಂದು ಹೋಗುವ ಪರಿಪಾಠವಿತ್ತು. ಸತ್ತ ಹೆಣ್ಣು ಮಗಳು ಆ ಮನೆಯ ಬೇರೆ ಹೆಣ್ಣು ಮಕ್ಕಳ ಮೈಯಲ್ಲಿ ಅವೇಶಗೊಂಡು ತನಗೆ ಮದುವೆಯಾಗಬೇಕು! ಎಂದು ಹೆಳುತ್ತಾಳಂತೆ. ಅದಕ್ಕಾಗಿ ಈ ಮದುವೆ! ಒಟ್ಟಿನಲ್ಲಿ ಅಂತಹ ಸಂಬಂಧಗಳಿಂದಾಗಿ ಅನುಬಂಧಗಳು ಹುಟ್ಟುತ್ತಿದ್ದವು; ಎಂಬ ಸಾಲುಗಳನ್ನು ಓದುವಾಗ ರೋಮಾಂಚನವಾಗುತ್ತದೆ. ಎಂತಹ ಸ್ವಾರಸ್ಯ! ಇಂದು ಜೀವಂತ ಹೆಣ್ಣು ಹುಡುಗಿಯರಿಗೆ ಮದುವೆ ಮಾಡಿಕೊಡುವುದು ಕಷ್ಟ ಎಂದೆಣಿಸಿ, ಹೆಣ್ಣು ಮಕ್ಕಳ ಭ್ರೂಣ ಹತ್ಯೆ ನಡೆಯ ತೊಡಗಿದೆ! ಭೇಟಿ ಬಜಾವೊ ಅಂದೋಲನ ವೇ ಆರಂಭವಾಗಿದೆ... ಡಾ. ಸುನೀತಾ ಶೆಟ್ಟಿ ಅವರು ತನ್ನ ನೆನಪಿನಾಂಗಳದಿಂದ ಇಂತಹ ರುಚಿಕರವಾದ ನೂರಾರು ಅನುಭವಗಳನ್ನು ತನ್ನ ಸಾವಿರದ ಬಿಸಿಲು–ಬೆಳದಿಂಗಳು ಕೃತಿಯಲ್ಲಿ ಹೃದ್ಯವಾಗಿ ನೆವೇದಿಸಿಕೊಂಡಿದ್ದಾರೆ. ಇವುಗಳಲ್ಲಿ ಅಹಾ ಬಾಲ್ಯವೇ., ಕುಲೆಸೊಪ್ಪು, ಬಯಲಾಟ.., ಕಾಲೇಜಿನದಿನಗಳು., ಹಲೋಮುಂಬಯಿ ಮೊದಲಾದ ಅಧ್ಯಾಯಗಳನ್ನು ಓದುವುದೇ ಒಂದು ರೋಚಕ ಅನುಭವ. ಹೀಗೆ ತನ್ಮಯತೆಯಿಂದ ಸರಳವಾಗಿ ಓದುಗರನ್ನು ಓದಿಸಿಕೊಂಡು ಹೋಗುವ ಆತ್ಮಕಥನ ಒಮ್ಮೆಲೇ ಮುಕ್ತಾಯಗೊಳ್ಳುತ್ತದೆ. ಆಗ ಓದುಗ ಬೆಚ್ಚಿ ಬೀಳುತ್ತಾನೆ. ಅಯ್ಯೋ ದೇವರೇ ಸುನೀತಕ್ಕನವರ ಜೀವನ ಚರಿತ್ರೆ ಇಷ್ಟು ತೀವ್ರ ಕೊನೆಗೊಳ್ಳುವಂತಾಯಿತಲ್ಲ ಎಂದು ಓದುಗರ ಸಹಜವಾಗಿ ನಿರಾಶೆಗೊಳಗಾಗುತ್ತಾನೆ.!

ಹೌದು ಡಾ. ಸುನೀತಕ್ಕ ನವರ ಜೀವನ ಚರಿತ್ರೆ ಅತ್ಯಂತ ಮನೋಜ್ಞ ಕೃತಿ. ಕೊನೆಯ ಪುಟದ ಕಾರಣವನ್ನು ಲೇಖಕಿ ಸ್ವತಃ ತನ್ನ ಅರಿಕೆಯಲ್ಲಿ ಹೇಳಿಕೊಂಡಿರುವುದನ್ನು ಓದುವುದಕ್ಕೆ ಗಟ್ಟಿಯಾದ ಎದೆತನ ಬೇಕಾಗುತ್ತದೆ.

ನನ್ನ ಪ್ರಸ್ತುತ ಜೀವನ ಕಥವನ್ನು ಇನ್ನೂ ವಿಸ್ತಾರವಾಗಿ ವಿವರಗಳನ್ನು ದಾಖಲಿಸುವ ಮನಸ್ಸಿನಿಂದ ಬರೆಯತೊಡಗಿದೆ. ಈ ನಡುವೆ ಉಣಿ ಹಕ್ಕಿಯನ್ನು ಕಳೆದುಕೊಂಡ ಒಂಟಿ ಹಕ್ಕಿಯ ಸ್ಥಿಯಲ್ಲಿ ಕೇಖನಿ ಹಿಡಿಯಲಾಗದೆ ಬರವಣಿಗೆ ಸ್ಥಿಗಿತಗೊಂಡಿತು. ಉಷ್ಠೋನೆನಪುಗಳು ಅಗಸದ ಮುಗಿಲುಗಳಂತೆ ತೇಲಿಹೋದವು.." ಎಂದು ಕಂಬನಿ ಮಿಡಿದು ಓದುಗರಲ್ಲಿ ಹಂಚಿಕೊಂಡಿದ್ದರೆ.

ಡಾ. ಸುನೀತ ಶೆಟ್ಟಿ ಅವರ ಕೈ ಹಿಡಿದ ಮಹಾಬಲ ಶೆಟ್ಟಿ ಅವರು "ಸತಿಗೆ ಪಕ್ಕ ಪತಿ" ಯಾಗಿದ್ದರು. ಸರಳ–ಸಜ್ಜನ, ಅಪ್ಪಟ ಗಾಂಧೀವಾದಿಗಳಾಗಿದ್ದು ಅವರು ಕೇಂದ್ರ ಸರಕಾರದ ಉನ್ನತ ಹುದ್ದೆಯ ಹಿರಿಯ ನಿವೃತ್ತ ಅಧಿಕಾರಿಗಳಾಗಿದ್ದರು ಕಳೆದ ಗಾಂಧಿ ಜಯಂತಿಯಂದು (2–10–2015) ನಿಧನರಾದರು. ವಿಧಿಯ ವಿಪರ್ಯಸವಾಗಿದೆ. ಸಾವಿರದ ಬಿಸಿಲು ಬೆಳಂದಿಗಳು ಡಾ. ಸುನೀತಕ್ಕ ತನ್ನ ಕೈಹಿಡಿದ ನೆಚ್ಚಿನ ಗಂಡನಿಗೆ ಸಲ್ಲಿಸಿದ ಅಮರ ಸ್ಮಾರಕ! ಪುಸ್ತಕ ಪ್ರೇಮಿಗಳ ಸವಿನೆನಪಿನಲ್ಲಿ ಚಿರಸ್ಥಾಯಿ ಉಳಿದು ಕಾಡ ಬಹುದಾದ ಆಮೋಘ ಕೃತಿ ರತ್ನ! ಸನ್ನಿಧಿ ಪ್ರಕಾಶನದ ಮಧುರ ಕೊಡುಗೆ ಪುಸ್ತಕದ ಪ್ರತಿಗಳಿಗಾಗಿ ಸಂಪರ್ಕಿಸಿ : 09870384040

*– ಎಸ್ಕೆ ಹಳೆಯಂಗಡಿ, ಬರೋಡ*

## ಯುನೆಸ್ಕೋ ಕಾರ್ಯಕ್ರಮದಲ್ಲಿ ಭಾಗಿಯಾದ ಹಾಂಗ್‌ಕಾಂಗ್ ಕನ್ನಡ ಸಂಘ

ಹಾಂಗ್‌ಕಾಂಗಿನಲ್ಲಿ ಯುನೆಸ್ಕೋ ವತಿಯಿಂದ ಆಯೋಜಿಸಲಾಗಿದ್ದ ಶಾಂತಿ ಮತ್ತು ಸಮರ್ಥನೀಯ ಅಭಿವೃದ್ಧಿಗಾಗಿ ಅಂತರಾಷ್ಟ್ರೀಯ ಯುವ ಮಹೋತ್ಸವ ಕಾರ್ಯಕ್ರಮದಲ್ಲಿ ಕನ್ನಡ ಸಂಘವು ಅತಿ ಉತ್ಸುಕತೆಯಿಂದ ಭಾಗವಹಿಸಿತ್ತು. ಸಂಘದ ಖಜಾಂಚಿಗಳಾದ ಶ್ರೀ ಹರ್ಷನರಸಿಂಹ, ಉಪಾಧ್ಯಕ್ಷರಾದ ಶ್ರೀಮತಿ ಶೋಭಾ ಶ್ರಾಫ್, ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಸದಾಶಿವ ಹೆಗ್ಗಡೆ, ಶ್ರೀ ರವಿ, ಮಾಜಿ ಅಧ್ಯಕ್ಷರುಗಳಾದ ಶ್ರೀ ಬಾಬು ಮಾಜಿ ಕಾರ್ಯದರ್ಶಿಗಳಾದ ಶ್ರೀಮತಿ ರಮಾ ಹೆಗಡೆ, ಶ್ರೀ ರತನ್ ಹೆಗಡೆ, ಮಾಜಿ ಖಜಾಂಚಿಗಳಾದ ಶ್ರೀ ವಿಜಯ್‌ಕುಮಾರ್, ಶ್ರೀ ಶ್ರೀನಿವಾಸ್ ಮೂರ್ತಿ, ಅವರ ಉಪಸ್ಥಿತಿಯಲ್ಲಿ ಕನ್ನಡ ಸಂಘವು ಪ್ರತ್ಯೇಕವಾದ ಕರ್ನಾಟಕ ಮಾಹಿತಿ ಕಟ್ಟೆಯನ್ನು ನಿರ್ಮಿಸಿಕೊಂಡು. ಬಂದಂತಹ ಅತಿಥಿಗಳಿಗೆ ಕರ್ನಾಟಕದ ಬಗ್ಗೆ ಕನ್ನಡ ನಾಡು ನುಡಿಯ ಬಗ್ಗೆ ವಿವರಣೆ ಕೊಡುತ್ತಾ, ಮಾಹಿತಿಪ್ರಚಾರದಲ್ಲಿ ತೊಡಗಿಕೊಂಡಿದ್ದರು. ಭಾರತದ ಇತರೆ ಸಂಘ ಸಂಸ್ಥೆಗಳು, ಯುನೆಸ್ಕೋ ಸಹಯೋಗದ ಸಮಿತಿಗಳು, ಕಾರ್ಯಕ್ರಮದಲ್ಲಿ ತಮ್ಮ ತಮ್ಮ ದೇಶ ಭಾಷೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸಿದವು. ಕನ್ನಡ ಸಂಘದಿಂದ ಶ್ರೀಮತಿ ಸುಷ್ಮಾ ಪ್ರದೀಪ್‌ರವರು ಭರತನಾಟ್ಯ ನೃತ್ಯವನ್ನು ಪ್ರದರ್ಶಿಸಿದರು. ಕನ್ನಡ ಸಂಘದ ಎಲ್ಲಾ ಮಕ್ಕಳು ಇತರ ಸದಸ್ಯರೊಂದಿಗೆ "ಅಪಾರಕೀರ್ತಿ ಗಳಿಸಿ ಮೆರೆದ" ಎಂಬ ಹಾಡನ್ನು ಹಾಡಿ ಎಲ್ಲರ ಮನ ಸಂತೋಷಪಡಿಸಿದರು.




ವರದಿ: ಡಾ. ಬಾಬು ಬಿ. ಯಶವಂತ್
ಅಧ್ಯಕ್ಷರು, ಹಾಂಗ್‌ಕಾಂಗ್ ಕನ್ನಡ ಸಂಘ



ತುಮಕೂರು : ಇತ್ತೀಚೆಗೆ ಶಿವಂಗಂಗೆಯಲ್ಲಿ ಜರುಗಿದ ಸಮಾರಂಭದಲ್ಲಿ ಶ್ರೀ ಶ್ರೀ ಶಿವಗಂಗೆ ಮಲಯ ಶಾಂತಮುನಿ ಸ್ವಾಮೀಜಿಯವರು ಹೃದಯವಾಹಿನಿ ಸಂಪಾದಕ ಕೆ.ಪಿ. ಮಂಜುನಾಥ ಸಾಗರ್ ಅವರನ್ನು ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ವಿಜಯವಾಣಿ ಕಾರ್ಯನಿರ್ವಾಹಕ ಸಂಪಾದಕ ಶ್ರೀ ವಿಜಯ ಸಂಕೇಶ್ವರ, ಮಾಜಿ ಸಚಿವ ವಿ. ಸೋಮಣ್ಣ ಮತ್ತು ಮುಂತಾದ ಗಣ್ಯರು ಉಪಸ್ಥಿತರಿದ್ದರು.

## ಮುಂಬಯಿ : ವಿದ್ಯಾದಾಯಿನಿ ಸಭಾ ರಾತ್ರಿ ಶಾಲೆ, ವಾರ್ಷಿಕೋತ್ಸವ

ಪ್ರತೀ ವರ್ಷ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶವನ್ನು ಕೆನರಾ ವಿದ್ಯಾದಾಯಿನಿ ರಾತ್ರಿ ಶಾಲೆಯು ಪಡೆಯುತ್ತಿದ್ದು, ಮುಂಬಯಿಯಲ್ಲಿ ರಾತ್ರಿ ಶಾಲೆಯು ಗುರುತಿಸಿಕೊಂಡಿದೆ. ಈ ವರ್ಷದ ವಿದ್ಯಾರ್ಥಿಗಳೂ ಇದೇ ರೀತಿ ಶ್ರಮವಹಿಸಿ ಉತ್ತಮ ಫಲಿತಾಂಶ ತಂದು ಶಾಲೆಗೆ ಹಾಗೂ ವಿದ್ಯಾದಾಯಿನಿ ಸಭಾಕ್ಕೆ ಹೆಸರು ತರಬೇಕು ಎಂದು ವಿದ್ಯಾದಾಯಿನಿ ರಾತ್ರಿ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಗೌರವ ಅಧ್ಯಕ್ಷ ಪುರುಷೋತ್ತಮ ಕೋಟ್ಯಾನ್ ಮಾತನಾಡಿದರು.

ಅವರು ಇತ್ತೀಚೆಗೆ ಪೋರ್ಟ್ ಆರ್ಯ ಸಮಾಜದ ಸಭಾಗ್ರಹದಲ್ಲಿ ಕೀರ್ತಿಶೇಷರಾದ ಶ್ರೀ ನಿರಂಜನ ಸ್ವಾಮಿ ಮತ್ತು ಮಂಗಳೂರು ದಾಮೋದರ ಆರ್. ಸುವರ್ಣ ವೇದಿಕೆಯಲ್ಲಿ ವಿದ್ಯಾದಾಯಿನಿ ಸಭಾದ 96ನೇ ಮತ್ತು ಕೆನರಾ ವಿದ್ಯಾದಾಯಿನಿ ರಾತ್ರಿ ಶಾಲೆಯ 90ನೇ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅಪಾರ ಸಾಧನೆಗೈದ ಕೀರ್ತಿಶೇಷರಾದ ಶ್ರೀ ನಿರಂಜನ ಸ್ವಾಮಿ ಮತ್ತು ದಾಮೋದರ ಆರ್. ಸುವರ್ಣರವರ ವೇದಿಕೆ ನಿರ್ಮಿಸಿ ಅದರಡಿಯಲ್ಲಿ ಇಂದಿನ ಈ ಸಮಾರಂಭ ಆಚರಿಸುತ್ತಿರುವುದು ಅಭಿನಂದನೀಯ ಎಂದು ಹೇಳುತ್ತಾ, ಸರ್ವ ಹಳೆವಿದ್ಯಾರ್ಥಿಗಳು ಶಾಲಾ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹಿಸಬೇಕೆಂದು ಕರೆಯಿತ್ತರು. ಹಾಗೂ ಇಂತಹ ಕೀರ್ತಿಶೇಷರ ನೆನಪನ್ನು ಪ್ರತೀ ವರ್ಷ ಮಾಡುವುದು ಅಗತ್ಯ ಎಂದು ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿ, ಹಳೆ ವಿದ್ಯಾರ್ಥಿ, ಕ್ವಾಲಿಟಿ ಕ್ಯಾಟರರ್ಸ್ ನ ಮಾಲಕ ಶ್ರೀ ಭುಜಂಗ ಶೆಟ್ಟಿಯವರು ಮಾತನಾಡುತ್ತಾ, ಶಾಲಾ ಹಳೆವಿದ್ಯಾರ್ಥಿಯಾಗಿ ಇಂದು ಈ ಸಮಾರಂಭದಲ್ಲಿ ಭಾಗವಹಿಸಲು ತುಂಬಾ ಸಂತೋಷವಾಗಿದೆ. ಇಂದಿನ ಸಮಯದಲ್ಲಿ ವಿದ್ಯೆಗೆ ತುಂಬಾ ಮಹತ್ವ ಇದೆ. ವಿದ್ಯೆಯಿಂದ ವಂಚಿತರಾದ ಮಕ್ಕಳನ್ನು ತಂದು ವಿದ್ಯೆಗೆ ದಾರಿ ತೋರಿಸಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಹಾಗೂ ಧರ್ಮಾರ್ಥ ಶಿಕ್ಷಣ ಪಡೆದು ಜೀವನದಲ್ಲಿ ಯಶಸ್ವಿಯಾಗಬೇಕೆಂದು ಹೇಳಿದರು.




ನ್ಯೂಜಿಲ್ಯಾಂಡ್ : ಅಕ್ಲೆಂಡ್‌ನಲ್ಲಿ ನ್ಯೂಜಿಲ್ಯಾಂಡ್ ಕನ್ನಡ ಸಂಘವು ಯುಗಾದಿ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗಾಯಕಿ ಶಮಿತಾ ಮಲ್ನಾಡ್ ಅವರು ಕನ್ನಡದ ಭಾವಗೀತೆ, ಚಿತ್ರಗೀತೆಗಳನ್ನು ಹಾಡಿ ನೆರೆದ ಕನ್ನಡಿಗರನ್ನು ರಂಜಿಸಿದ್ದರು.




ನಾಗತಿಹಳ್ಳಿ : ಖ್ಯಾತ ಚಲನಚಿತ್ರ ನಿರ್ದೇಶಕ ಹಾಗೂ ಲೇಖಕ ಡಾ. ನಾಗತಿಹಳ್ಳಿ ಚಂದ್ರಶೇಖರರವರು ತಮ್ಮ ಹುಟ್ಟೂರಿನಲ್ಲಿ ಪ್ರತಿ ವರ್ಷ ಯುಗಾದಿಯಂದು ಹಮ್ಮೊಕೊಳ್ಳುವ ನಾಗತಿಹಳ್ಳಿ ಸಂಸ್ಕೃತಿ ಹಬ್ಬವನ್ನು ಏಪ್ರಿಲ್ 8ರಂದು ಆಚರಿಸಲಾಯಿತು. ಈ ಸಮಾರಂಭದಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಪಾಲ್ಗೊಂಡಿದ್ದವು. ಚಿತ್ರದಲ್ಲಿ ಡಾ. ನಾಗತಿಹಳ್ಳಿ ಚಂದ್ರಶೇಖರ್ ಮತ್ತು ದೂರದರ್ಶನ ಕಾರ್ಯಕ್ರಮ ಸಂಯೋಜಕ ಶ್ರೀ ನಾಗತಿಹಳ್ಳಿ ಜಯಪ್ರಕಾಶ್ ಅವರನ್ನು ಕಾಣಬಹುದು.



ಒಬ್ಬನು ಮಾತನಾಡಿದಾಗ ಎಲ್ಲರೂ ಕೇಳುತ್ತಾರೆಂದರೆ ಅದು ಶೋಕ ಸಭೆ. ಎಲ್ಲರೂ ಮಾತನಾಡಿ ಯಾರು ಕೇಳಿಸಿಕೊಳ್ಳುವುದಿಲ್ಲವಲ್ಲ ? ಅದು ಲೋಕಸಭೆ.

MANJUNATH ASSOCIATES
CONSULTING ENGINEERS AND ARCHITECTS
Raghu Building, IInd Floor,
Urwa Stores , Mangalore - 575 006.
Ph : 0824-4281531,
Mobile : 9886510087
E-mail : hrudayavahini@rediffmail.com
K.P. Manjunath
Contact for
PLAN
ESTIMATE
VALUATION
SUPERVISION
CONSTRUCTION
SITES & READY BUILT HOUSE




## ತನಿಖೆ, ವರದಿಗಾರಿಕೆ ಎರಡಕ್ಕೂ ಸೈ..



ಶ್ರೀ ಎಸ್. ಗಿರೀಶ್ ಬಾಬು

ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ ಸಂಸ್ಥೆಯಲ್ಲಿ ಪತ್ರಿಕೋದ್ಯಮ ಸ್ನಾತಕೋತ್ತರ ಪದವಿ ಪಡೆದಿರುವ ಎಸ್. ಗಿರೀಶಬಾಬು ಕಳೆದ 18 ವರ್ಷಗಳಿಂದಲೂ ಪತ್ರಿಕೋದ್ಯಮದಲ್ಲಿ ಕಾರ್ಯನಿರತರು. ಉದಯ ಟಿವಿ. ಕನ್ನಡಪ್ರಭ, ವಿಜಯ ಕರ್ನಾಟಕ ಸೇರಿದಂತೆ ಇದೀಗ ಉದಯವಾಣಿ ಪತ್ರಿಕೆಯ ಮುಖ್ಯ ವರದಿಗಾರರು.

ಸಿವಿಕ್, ಪರಿಸರ ರಕ್ಷಣೆ, ಜಲ ಸಂರಕ್ಷಣೆ ಹಾಗೂ ರಾಜಕೀಯ ಬೀಟ್‌ಗಳ ನಿರ್ವಹಣೆ ಮಾಡಿ ಖ್ಯಾತರಾದವರು. ಪ್ರಸ್ತುತ ಉದಯವಾಣಿ ಪತ್ರಿಕೆಯ ಮುಖ್ಯ ವರದಿಗಾರರಾಗಿ ಹಾಗೂ ಪ್ರಮುಖ ರಾಜಕೀಯ ವರದಿಗಾರರಾಗಿ ಕಾರ್ಯನಿರತರು. 1997ರಲ್ಲಿ ಉದಯ ಟಿವಿಯ ಕಿರಿಯ ವರದಿಗಾರರಾಗಿ ಪತ್ರಿಕಾರಂಗ ಪ್ರವೇಶ. ಇದೇ ವರ್ಷ ಡಿಸೆಂಬರ್‌ನಲ್ಲಿ ಕನ್ನಡಪ್ರಭ ಬೆಂಗಳೂರು ಆವೃತ್ತಿಯ ಉಪ ಸಂಪಾದಕಾರಿ, 1998ರಲ್ಲಿ ಬೆಳಗಾವಿ ಜಿಲ್ಲಾ ವರದಿಗಾರರಾಗಿ ಬಡ್ತಿ. ದೇವದಾಸಿ ಪದ್ಧತಿ ಸೇರಿ ನೂರಾರು ಪ್ರಮುಖ ಮುಖಪುಟ ವರದಿಗೆ ಹೆಸರುವಾಸಿ. ತನಿಖಾ ವರದಿಗಾರಿಕೆಯಲ್ಲೂ ಇವರದು ಎತ್ತಿದ ಕೈ.

ಕನ್ನಡ ಪತ್ರಿಕಾರಂಗದಲ್ಲಿ ಪರಿಸರ ಹಾಗೂ ರಕ್ಷಣಾ ಕ್ಷೇತ್ರವನ್ನು ಪ್ರಮುಖ ವರದಿಗಾರಿಕೆಯ ಕ್ಷೇತ್ರವಾಗಿಸಿಕೊಂಡು ಹಲವಾರು ಪ್ರಮುಖ ವರದಿ ಪ್ರಕಟಿಸಿದ ಹೆಗ್ಗಳಿಕೆ ಇವರದು.

ರಾಮನಗರದ ಹಂದಿಗೊಂದು ಅರಣ್ಯದಲ್ಲಿ ಏಷ್ಯಾದ ಅತಿದೊಡ್ಡ ಏಕಶಿಲಾ ಬೆಟ್ಟವನ್ನು ನಾಶಪಡಿಸಿ ಬುದ್ಧಪ್ರತಿಮೆ ಹಾಗೂ ಅಧುನಿಕ ರೆಸಾರ್ಟ್ ನಿರ್ಮಿಸುವ ಯೋಜನೆ ವಿರುದ್ಧ ಸರಣಿ ವರದಿ ಮಾಡಿದರು. ಈ ಯೋಜನೆಗೆ ಹಣ ಸಂಗ್ರಹಿಸಲು ಬಾಲಿವುಡ್ ನಟ ಶಾರುಖ್‌ಖಾನ್ ಸಂಗೀತ ಕಾರ್ಯಕ್ರಮವೂ ಆಯೋಜನೆಯಾಗಿದ್ದರಿಂದ ಈ ವಿಶೇಷ ವರದಿ ರಾಷ್ಟ್ರವ್ಯಾಪಿ ಗಮನ ಸೆಳೆಯಿತು. ಪರಿಣಾಮವಾಗಿ ತಾನು ನೀಡಿದ್ದ ಒಪ್ಪಿಗೆಯನ್ನು ಅರಣ್ಯ ಇಲಾಖೆ ಹಿಂಪಡೆಯಬೇಕಾಯಿತು. ಇವರು ಕರ್ನಾಟಕ ಮಾಧ್ಯಮ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

# ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು – 2015

## ಸಾಹಸಿ ಪತ್ರಕರ್ತ

ಮಂಡ್ಯ ಜಿಲ್ಲಾ ವರದಿಗಾರರಾಗಿ ಸೇವೆ ಸಲ್ಲಿಸಿರುವ ಚೈತನ್ಯಕುಮಾರ ಎರಡೂವರೆ ದಶಕಗಳವರೆಗೆ ಕನ್ನಡಪ್ರಭ ಪತ್ರಿಕೆಯಲ್ಲಿ ಸೇವೆ ಸಲ್ಲಿಸಿದ್ದು ಜಿಲ್ಲೆಯ ಅನೇಕ ಸಮಸ್ಯೆಗಳನ್ನು ವರದಿ ಮಾಡಿ ಸರ್ಕಾರದ ಗಮನಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

ಇದೇ ಸಂದರ್ಭದಲ್ಲಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ವರದಿಗಾರರಾಗಿಯೂ ಸೇವೆ ಸಲ್ಲಿಸಿ ಹಲವಾರು ಸಮಸ್ಯೆಗಳನ್ನು ವರದಿ ಮಾಡಿ ಸರ್ಕಾರದ ಕಣ್ಣುತೆರೆಸಿದ್ದಾರೆ. ಸಮಾಜಕ್ಕೆ ಹಾಗೂ ಸರ್ಕಾರಕ್ಕೆ ಸೇತುವೆಯಾಗಿ ಇವರು ಮಾಡಿದ ವರದಿಗಳು ಸ್ಮರಣೀಯ

ಆರ್ಥಿಕ ಸಂಕಷ್ಟದಲ್ಲಿಯೂ ಪ್ರಜಾವಾರ್ತೆ ಪತ್ರಿಕೆ ಪ್ರಾರಂಭಿಸಿ



ಶ್ರೀ ಪಿ.ಜೆ. ಚೈತನ್ಯಕುಮಾರ

ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿರುವುದು ಅವರ ಕ್ರಿಯಾಶೀಲತೆಗೆ ಸಾಕ್ಷಿ.

ಮಂಡ್ಯದಲ್ಲಿ ವಿವಿಧ ಸಂಘಟನೆಗಳೊಂದಿಗೆ ಗುರುತಿಸಿಕೊಂಡಿದ್ದರು ದೀನದಲಿತರ ಸಮಸ್ಯೆಗಳ ಪರಿಹಾರಕ್ಕೆ ತಮ್ಮದೇ ರೀತಿಯಲ್ಲಿ ಸಹಾಯ ನೀಡುತ್ತಾ ಬಂದಿದ್ದಾರೆ. ಇದೀಗ ಪ್ರಸಕ್ತ ಸಾಲಿನ ಮಾಧ್ಯಮ ಅಕಾಡೆಮಿ ಪುರಸ್ಕಾರ ಒಲಿದು ಬಂದಿದೆ.

## ಬೀದರ್‌ನ ಬಿಗ್ ಬ್ರದರ್



ಶ್ರೀ ಖಾಜಿ ಅಲಿಒದ್ದೀನ್ (ಅಲಿಬಾಬಾ)

ಕಳೆದ ಮೂರು ದಶಕಗಳಿದಂದ ಪತ್ರಿಕಾರಂಗದಲ್ಲಿ ‘ಅಲಿಬಾಬಾ’ ಎಂದೇ ಚಿರಪರಿಚಿತರಾಗಿರುವ ಕಾಜಿ ಅಲಿಯೊದ್ದೀನ್ ‘ಬೀದರ್ ಕೀ ಆವಾಜ್ ಹಾಗೂ ಸುರ್ಖ್ ಜಮೀನ್’ ಉರ್ದು ದಿನಪತ್ರಿಕೆಗಳ ಉಪ ಸಂಪಾದಕರು. ಗಡಿಜಿಲ್ಲೆ ಬೀದರ್‌ನಲ್ಲಿ ಚಿರಪರಿಚಿತರು. 1988 ಮತ್ತು 1992ರಲ್ಲಿ ಬೀದರ್‌ನಲ್ಲಿ ನಡೆದ ಪತ್ಯೇಕ ಗಲಭೆ ಸಂದರ್ಭದಲ್ಲಿ ಶಾಂತಿ ಮರುಸ್ಥಾಪಿಸುವಲ್ಲಿ ‘ಬೀದರ್ ಕೀ ಆವಾಜ್’ ಹಾಗೂ ಸುರ್ಖ್ ಜಮೀನ್” ಉರ್ದು ದಿನಪತ್ರಿಕೆಗಳ ಪಾತ್ರ ಮರೆಯಲಾಗದು.

ಚಿಂತಕರೂ ಆಗಿರುವ ಇವರು ಯುವ ಪತ್ರಕರ್ತರಿಗೆಮಾರ್ಗದರ್ಶಿಗಳಾಗಿದ್ದಾರೆಂದರೆ ಅತಿಶೋಕ್ತಿಯಾಗದು. ಪತ್ರಿಕೆ ಜತೆಗೆ ಸಾಮಾಜಿಕ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದು, ಜನಸಾಮಾನ್ಯರಿಗೆ ಅನ್ಯಾಯವಾದಾಗ ನ್ಯಾಯ ಒದಗಿಸಿ ಕೊಡಲು ಹೋರಾಡುತ್ತಲೇ ಇದ್ದಾರೆ.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮೊರೆ ಹೋಗಿ ಬೀದರಿನ ದುಲ್ಹನ್ ದರ್ವಾಜ’ ಪ್ರದೇಶದ ತೆರೆದ ಬಾವಿಯೊಂದರ ಹೂಳೆತ್ತಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಕರ್ನಾಟಕ ರಾಜ್ಯೋತ್ಸವ ಹಾಗೂ ಮಾಧ್ಯಮ ಅಕಾಡೆಮಿ ಪ್ರಶಸ್ತಿ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ರಾಜ್ಯಕಾರ್ಯನಿರತ ಪತ್ರಕರ್ತರ ಸಂಘದ ಕನ್ನಡೇತರ ಉತ್ತಮ ಪತ್ರಕರ್ತರ ಪುರಸ್ಕಾರ ಹೀಗೆ ನಾನಾ ಪ್ರಶಸ್ತಿಗಳು ಅವರನ್ನು ಅರಸಿಕೊಂಡು ಬಂದಿದೆ. ಪತ್ರಿಕಾ ಸೇವೆಗೆ ಮಡುಪಾಗಿರುವ ಇವರಿಗೆ ಸಹಜವಾಗಿಯೇ ಪ್ರಸಕ್ತ ಸಾಲಿನ ಮಾಧ್ಯಮ ಅಕಾಡೆಮಿ ಪುರಸ್ಕಾರ ಒಲಿದು ಬಂದಿದೆ.

## ಪರಿಸರ ಪ್ರೇಮಿ



ಶ್ರೀ ಜಿ.ಡಿ. ಯತೀಶಕುಮಾರ

ಮಂಡ್ಯ ಜಿಲ್ಲೆಯವರಾದ ಜಿ.ಡಿ. ಯತೀಶಕುಮಾರ ಕಳೆದ 21 ವರುಷಗಳಿಂದಲೂ ಪ್ರಜಾವಾಣಿ ದೈನಿಕದಲ್ಲಿ ವಿವಿಧ ಹುದ್ದೆಗಳನ್ನು ನಿಭಾಯಿಸಿದ್ದಾರೆ.ಕೆಲಕಾಲ ತೋಟಗಾರಿಕಾ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಆದಿವಾಸಿಗಳ ಬಗ್ಗೆ ಅಪಾರ ಕಾಳಜಿ ಹೊಂದಿರುವ ಇವರು ಬಿಳಿಗಿರಿರಂಗನ ಹುಲಿ ಅಭಯಾರಣ್ಯದಲ್ಲಿ ಸೋಲಿಗರಿಗಾಗಿ ಅರಣ್ಯ ಇಲಾಖೆ ಮತ್ತು ವಾಸನ್ ಜತೆ ಸೇರಿ ಕಣ್ಣಿನ ತಪಾಸಣಾ ಶಿಬಿರ ನಡೆಸಿದ್ದಾರೆ.

ನಾಗರಹೊಳೆ ಅಭಯಾರಣ್ಯದಿಂದ ಈವರೆಗೂ ಪೂರ್ಣವಾಗದ ಆದಿವಾಸಿಗಳ ಸ್ಥಳಾಂತರದ ಬಗ್ಗೆ ಸರಣಿ ಲೇಖನ ಬರೆದಿದ್ದಾರೆ. ವರದಿಗಾರಿಕೆ ಜತೆಯಲ್ಲೇ ವನ್ಯಜೀವಿ ಛಾಯಾಗ್ರಹಣದ ಹವ್ಯಾಸ ಹೊಂದಿರುವ ಇವರ ಪರಿಸರ, ಅರಣ್ಯ, ಪರಿಸರ ಹಾಗೂ ರಾಜಕೀಯ ವಿಷಯಗಳಲ್ಲಿ ಅಧ್ಯಯನ ಮತ್ತು ಲೇಖನ ಬರೆದಿದ್ದಾರೆ. ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಕಲಾಪಗಳ ವರದಿಗಳನ್ನು ಮಾಡಿದ ಅನುಭವ ಹೊಂದಿದ್ದಾರೆ.

1995ರಲ್ಲಿ ಪ್ರಜಾವಾಣಿ ಸೇರಿದ ನಂತರ ವರದಿಗಾರರಾಗಿ, ಹಿರಿಯ ವರದಿಗಾರರಾಗಿ ಇದೀಗ ವಿಶೇಷ ಪ್ರತಿನಿಧಿ ಮತ್ತು ಬ್ಯೂರೋ ಮುಖ್ಯಸ್ಥ. ಮೈಸೂರು ಜಿಲ್ಲಾ ವರದಿಗಾರರಾಗಿಯೂ ಎರಡು ವರುಷ ಸೇವೆ ಸಲ್ಲಿಸಿದ್ದಾರೆ.

ಇದೀಗ ಇವರಿಗೆ ಕರ್ನಾಟಕ ಮಾಧ್ಯಮ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ದೊರಕಿದೆ.

**20–11–2015ರಂದು 40 ಪತ್ರಕರ್ತರಿಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಯಿತು.**

ಮುಂದುವರಿಯುವುದು....

ಎಚ್ಚರಿಕೆ :

ನಿಮ್ಮ ಪತ್ನಿ ಏನಾದರು DUAL-SIM MOBILE PHONE ಬಳಸುತ್ತಿದರೆ , ದಯವಿಟ್ಟು ಎರಡೂ ನಂಬರ್ ಗಳನ್ನು ಒಂದೇ ಹೆಸರಿನಡಿ "WIFE" ಎಂದು ಸೇವ್ ಮಾಡಿಕೊಳ್ಳಿ

ದಯವಿಟ್ಟು WIFE1 ಮತ್ತು WIFE2 ಎಂದು SAVE ಮಾಡಿಕೊಳ್ಳಬೇಡಿ !!



ಆಸ್ಪತ್ರೆಗೆ ದಾಖಲಾಗಿರುವ ಪತಿ ಇಂದ ಸಾಮಾಜಿಕ ಜಾಗೃತಿ ಸಂದೇಶ (SOCIAL-AWARENESS MESSAGE)

ಸುಸಜ್ಜಿತ ಸುಂದರವಾದ ಮನೆಗಳು
Ready House Near Kavoor - 2 BHK
3.5cents 970 Sft
Near Chowki, Malemar - 8cents 1250Sft
READY BUILT HOUSE FOR SALE NEAR KULUR
4.34 Cents Land, 1,600 sft plinth Area
1.5 Acre and 18cents Land Available Kodikal
Apartment at Urva.
2 BHK 930 SFT
& 1100 SFT
SINGLE BEDROOM APPT. AT ASHOKNAGAR
10 Cents Residential Site Near Panjimogaru
15 Cents at Chilimbi Mangalore
3.50 Acre & 2.5 Acre Land / Plots Near International Airport Kenjaru 7 km From Mangalore City.
And Many More Properties
Contact : MAASS Realators, Mangalore. +917899284477




ಲೇಖನ

# ತ್ರಿಪದಿಗಳ ಬ್ರಹ್ಮ ಸರ್ವಜ್ಞ ಕವಿ

✍ ರಂಗಸ್ವಾಮಿ

ನಮ್ಮ ಕನ್ನಡ ಕವಿಗಳು ಅದೆಷ್ಟೋ ವಿವಿಧ ರೀತಿಯ ವಿಚಾರಗಳು ಸಮಾವೇಶಗೊಳ್ಳುವ ಬಿಡಿ ಪದ್ಯಗಳನ್ನೂ, ಕಾವ್ಯಗಳನ್ನೂ ರಚಿಸಿ ಈ ಪ್ರಪಂಚಕ್ಕೊಂದು ಬಗೆಯ ಉಪಕಾರ ಮಾಡಿದ್ದಾರೆ. ಈ ಕವಿಗಳ ಸಾಲಿನಲ್ಲಿ ಸರ್ವಜ್ಞ ಕವಿಯು ಕೂಡ ಕನ್ನಡ ಜನತೆಯೊಂದಿಗೆ ಒಂದಾಗಿ, ಜನತೆಯ ಲೋಪದೋಷಗಳನ್ನು ಅವರವರ ನಿತ್ಯ ಜೀವನದಿಂದ ಅರಿತುಕೊಂಡು ತನ್ನಲ್ಲಿ ಉದ್ಭವಿಸಿದ ಭಾವನೆಗಳಂತೆ ನಿಷ್ಪಕ್ಷಪಾತತನದಿಂದ ಸ್ಪಷ್ಟವಾಗಿ ಚಿಕ್ಕ ಹಾಗೂ ಚೊಕ್ಕವೆನಿಸಿದ ಮೂರು ಚರಣಗಳಲ್ಲಿ ತನ್ನ ಕಾವ್ಯ ಪ್ರತಿಭೆಯನ್ನು ವ್ಯಕ್ತಪಡಿಸಿದ್ದಾನೆ. ಸರ್ವಜ್ಞ ಕವಿಯ ವಚನಗಳಲ್ಲಿ ರಸವಂಯವಾದ ಸುಭಾಷಿತವಿದೆ. ವಿವಿಧ ಬಗೆಯ ಹಾಸ್ಯದ ಲಾಸ್ಯ ಒಳಮೂಡಿದೆ. ಸಿಹಿನಗೆಯ ಸರಸ-ಸಲ್ಲಾಪ ಜ್ಞಾನಿಗಳ ದಿವ್ಯ ಪ್ರಕಾಶವಿದೆ. ಧೀರತನದ ಗಂಭೀರ ಹಾಸ್ಯವಡಗಿದೆ. ಕರುಣಾಮಯ ಸ್ವರ ನಿನಾದಗೊಂಡಿದೆ. ಜಾತಿ-ಮತ-ಧರ್ಮಗಳ ತೊಡಕು ಇಲ್ಲದಾಗಿದೆ. ಮಹಾಜ್ಞಾನಿಗಳು ಉದ್ಗಾರ ತೆಗೆದಿರುವಂತೆ “ಸರ್ವಜ್ಞನ ಜಾತಿ, ಮಾನವ ಜಾತಿ, ಅವನ ಮತ ದೇವಮತ ಅವನ ಬಂಧುತ್ವ ವಿಶ್ವಬಂಧುತ್ವ ಅವನ ಸ್ಥಾನ ಸರ್ವಶ್ರೇಷ್ಟವಾದ ಸ್ಥಾನ” ಎಂದು ಹೇಳಬಹುದು. ಈಗ ಎಂಟುನೂರು ವರ್ಷಗಳ ಹಿಂದೆ ಬಸವಣ್ಣನವರ ವಚನ ಸಾಹಿತ್ಯ ಪ್ರಕಾಶಗೊಂಡಂತೆ ಈ

ಆದ್ದರಿಂದಲೇ ಸರ್ವಜ್ಞನನ್ನು “ಪ್ರಪಂಚದಲ್ಲಿಯೇ ಆಡು ಮುಟ್ಟದ ಸೊಪ್ಪಿಲ್ಲ” ಅಂದರೆ ಸರ್ವಜ್ಞನು ಹೇಳದೇ ಬಿಟ್ಟಿರುವ ವಿಷಯಗಳಿಲ್ಲವೆನ್ನಬಹುದು. ಈತನು ವಿಶ್ವದ ಅಸ್ತಿತ್ವದ ಬಗ್ಗೆ ಸೂಕ್ಷ್ಮವಾದ ಜ್ಞಾನ ಸಂಗ್ರಹಿಸಿ ಜಾಗತಿಕ ಹೋರಾಟದ ಚಟುವಟಿಕೆಗಳನ್ನು ಕುರಿತು “ಜ್ಯೋತಿಯು ಎಲ್ಲರ ಮನೆಗಳಲ್ಲಿಯೂ ಒಂದೇ ಬಗೆಯ ಪ್ರಕಾಶವನ್ನೀಯುವಂತೆ ಜಗತ್ತಿನ ಸಕಲ ಜಾತಿಯ ಜನಾಂಗದವರು ಒಂದೇ ದೈವೀ ಸೂತ್ರದಲ್ಲಿಬಂಧಿಸಲ್ಪಟ್ಟವರಾಗಿದ್ದಾರೆಂಬುದನ್ನು ಗಮನಿಸಬೇಕು. ಮಾನವರಲ್ಲಿ ಇಂದು ಆಸೆ, ದುರಾಸೆಗಳಿಂದ ಕೂಡಿದ ಅಶಾಂತಿಯುತ ತಾಂಡವವಾಡುತ್ತಿದೆ ಮಾನವನಲ್ಲಿಯ ಸುಪ್ತ



ಶಿವನಿಗಿಂತ ಅಜ್ಞಾನಾವೃತವಾಗಿ ಎಚ್ಚೆತ್ತ ಜೀವ ಪಶುವಾಗಿ ಬಲಶಾಲಿಯಾಗಿದ್ದಾನೆ. ಈ ಉದ್ರಿಕ್ತ ಪಶುವಿನ ಆರ್ಭಟ ತಾತ್ಪೂರ್ತಿಕ ಸುಪ್ತ

ಸರ್ವಜ್ಞ!!”

ಮಕ್ಕಳ ಮೇಲಿನ ನಿಜವಾದ ಪ್ರೇಮದಿಂದ, ಮುದ್ದಾಟದಿಂದ ಚಿಕ್ಕಮಗುವಿನ ಶಿಕ್ಷಣವು ಸಾಗತಕ್ಕದಾಗದೆ. ಬಲತ್ಕಾರದಿಂದಲ್ಲದೇ, ಬೆತ್ತದ ಬೆದರಿಕೆಯಿಂದಲ್ಲದೆ ಮಕ್ಕಳಿಗೆ ಮುದ್ದಾಟದಿಂದಲೇ ಶಿಕ್ಷಣ ಕೂಡಿಸಬೇಕೆಂಬುದನ್ನು ಸರ್ವಜ್ಞನು ಮಾರ್ಮಿಕವಾಗಿ ಸೂಚಿಸಿರುತ್ತಾರೆ. “ಕೇಳುವವರಿದ್ದರೆ ಹೇಳುವುದು ಬುದ್ಧಿಯನ್ನು ಭಕ್ತಿಯಿಲ್ಲದ ಶಿಷ್ಯಗೊತ್ತಿ ಕೊಟ್ಟುಪದೇಶ ಬತ್ತಿದ ಕೆರೆಯ ಬಯಲಲ್ಲಿ ರಾಜಾನ್ನ ಬತ್ತಿ ಬೆಳೆದಂತೆ”. ಓದಿದ್ದನ್ನೇ ಓದಿಸಿದರೆ ಅದು ಮೇದ ಕಬ್ಬಿನ ಸಿಪ್ಪೆಯಂತೆ, ಸಪ್ಪೆ ತೋರುವುದು, ಎಂದು ಹೇಳಿದ್ದಾನೆ. “ವಿದ್ಯೆವೀಯದ ತಂದೆ, ಬುದ್ಧಿ ಹೇಳದ ಗುರುವು ಮಕ್ಕಳ ಬದ್ಧ ವೈರಿ” ಹೀಗೆ ಅದೆಷ್ಟೋ ಮುತ್ತಿನಂತಹ ಮಾತುಗಳನ್ನು ಶಿಕ್ಷಣ ವಿಚಾರದಲ್ಲಿ ನಿರೂಪಿಸಿದ ಸರ್ವಜ್ಞನ ವಚನಗಳನ್ನು ಗುರುಗಳಾದವರು ಅತ್ಯವಶ್ಯವಾಗಿ ಗಮನಿಸಿ ಆಚರಣೆಯಲ್ಲಿ ತರುವುದು ಪ್ರಸ್ತುತ ಸಮಯದಲ್ಲಿ ಅವಶ್ಯವಾಗಿದೆಯೆನ್ನಬಹುದು. ಸರ್ವಜ್ಞನು ಗುರು ಸ್ಥಾನಕ್ಕೆ ಕೊಟ್ಟ ಮಹತ್ವವನ್ನರಿತುಕೊಳ್ಳಬೇಕು.

*“ವಿದ್ಯೆ ಕಲಿತರೆ ಇಲ್ಲ ಬುದ್ಧಿ ಕಲಿತರೆ ಇಲ್ಲ ।*
*ಉದ್ಯೋಗ ಮಾಡಿದರೆ ಇಲ್ಲ,*
*ಗುರುಮುಖ,*
*ಇದ್ದಲ್ಲದಿಲ್ಲ-ಸರ್ವಜ್ಞ!!*
*ಗುರುರಾಯನುಪದೇಶ,*
*ದೊರೆಕೊಂಡಿತಾದಡೆ ।*
*ಹರಿವುದು ಪಾಪವೆಂತೆನಲು, ವಜ್ರದಿಂ ।*
*ಗಿರಿಯ ಹೊದ್ದಂತೆ’ - ಸರ್ವಜ್ಞ ॥*

ಇದರಿಂದ ಗುರುಸ್ಥಾನವು ಶಿಕ್ಷಣ ಪ್ರಪಂಚದಲ್ಲಿ ಅಗ್ರಸ್ಥಾನ ಪಡೆದಿದೆ ಎಂಬುದನ್ನು ಸರ್ವಜ್ಞನು ತನ್ನ ವಚನಗಳಿಂದ ವ್ಯಕ್ತಗೊಳಿಸಿದ್ದಾನೆ. “ಸರ್ವಜ್ಞನೆಂಬುವನು

ಮಕ್ಕಳ ಮೇಲಿನ ನಿಜವಾದ ಪ್ರೇಮದಿಂದ, ಮುದ್ದಾಟದಿಂದ ಚಿಕ್ಕಮಗುವಿನ ಶಿಕ್ಷಣವು ಸಾಗತಕ್ಕದಾಗದೆ. ಬಲತ್ಕಾರದಿಂದಲ್ಲದೇ, ಬೆತ್ತದ ಬೆದರಿಕೆಯಿಂದಲ್ಲದೆ ಮಕ್ಕಳಿಗೆ ಮುದ್ದಾಟದಿಂದಲೇ ಶಿಕ್ಷಣ ಕೂಡಿಸಬೇಕೆಂಬುದನ್ನು ಸರ್ವಜ್ಞನು ಮಾರ್ಮಿಕವಾಗಿ ಸೂಚಿಸಿರುತ್ತಾರೆ. “ಕೇಳುವವರಿದ್ದರೆ ಹೇಳುವುದು ಬುದ್ಧಿಯನ್ನು ಭಕ್ತಿಯಿಲ್ಲದ ಶಿಷ್ಯಗೊತ್ತಿ ಕೊಟ್ಟುಪದೇಶ ಬತ್ತಿದ ಕೆರೆಯ ಬಯಲಲ್ಲಿ ರಾಜಾನ್ನ ಬತ್ತಿ ಬೆಳೆದಂತೆ”. ಓದಿದ್ದನ್ನೇ ಓದಿಸಿದರೆ ಅದು ಮೇದ ಕಬ್ಬಿನ ಸಿಪ್ಪೆಯಂತೆ, ಸಪ್ಪೆ ತೋರುವುದು, ಎಂದು ಹೇಳಿದ್ದಾನೆ. “ವಿದ್ಯೆವೀಯದ ತಂದೆ, ಬುದ್ಧಿ ಹೇಳದ ಗುರುವು ಮಕ್ಕಳ ಬದ್ಧ ವೈರಿ” ಹೀಗೆ ಅದೆಷ್ಟೋ ಮುತ್ತಿನಂತಹ ಮಾತುಗಳನ್ನು ಶಿಕ್ಷಣ ವಿಚಾರದಲ್ಲಿ ನಿರೂಪಿಸಿದ ಸರ್ವಜ್ಞನ ವಚನಗಳನ್ನು ಗುರುಗಳಾದವರು ಅತ್ಯವಶ್ಯವಾಗಿ ಗಮನಿಸಿ ಆಚರಣೆಯಲ್ಲಿ ತರುವುದು ಪ್ರಸ್ತುತ ಸಮಯದಲ್ಲಿ ಅವಶ್ಯವಾಗಿದೆಯೆನ್ನಬಹುದು. ಸರ್ವಜ್ಞನು ಗುರು ಸ್ಥಾನಕ್ಕೆ ಕೊಟ್ಟ ಮಹತ್ವವನ್ನರಿತುಕೊಳ್ಳಬೇಕು.

ಸರ್ವಜ್ಞ ಕವಿಯ ತ್ರಿಪದಿಗಳ ವಚನ ಸಾಹಿತ್ಯವು ಬೆಳಕಿಗೆ ಬಂದಿದೆ. ಸರ್ವಜ್ಞನ ವಚನಗಳಲ್ಲಿ ಯುವಕ, ರೂಪಕ, ಉಪಮೆ, ಶ್ಲೇಷ, ದೃಷ್ಟಾಂತ ಈ ಅಲಂಕಾರಗಳು ಮುಖ್ಯವಾಗಿದೆ. ಈತನ ವಚನ ಸಾಹಿತ್ಯದಲ್ಲಿ ಅದ್ಭುತ, ಭೀಬಿತ್ಸ, ಶೃಂಗಾರ, ಹಾಸ್ಯ ರಸಗಳು ಸಮಾವೇಶವಾಗಿದೆ. ಅದರಲ್ಲೂ ಈ ಕವಿಯು ಹಾಸ್ಯರಸದಲ್ಲಿ ಒಳ್ಳೆ ಪ್ರಸಿದ್ಧಿಯಾಗಿದ್ದಾನೆ. ಈತನ ತ್ರಿಪದಿಯಲ್ಲಿ ಛಂದಸ್ಸಿನ ಸೊಬಗು ಮನೋಹರವಾಗಿದೆ. ಆದಿಪ್ರಾಸ, ಮಧ್ಯಪ್ರಾಸ, ಅಂತ್ಯಪ್ರಾಸಗಳಿಂದ ಒಳ್ಳೆ ಒಳ್ಳೆಯ ಸುಂದರವಾಗಿ ಪದ್ಯಗಳನ್ನು ಹೆಣೆದಿರುವನು. ಸರ್ವಜ್ಞಕವಿಯೆ ಒಬ್ಬ ಆಶು ಕವಿಯೆಂದರೆ ತಪ್ಪಾಗುವುದಿಲ್ಲ. ಈತನು ಯಾವುದೇ ಹೊಸ ಹೊಸ ವಿಷಯ ತಿಳಿದಕ್ಷಣವೇ ಆ ವಿಷಯದ ಮೇಲೆ ಪದ್ಯಗಳನ್ನು ರಚಿಸುವ ಶಕ್ತಿಯುಳ್ಳವನಾಗಿದ್ದನು ಈತನ ವಚನಗಳ ದೃಷ್ಟಾಂತಗಳಿಂದ ವೀರಶೈವ ಸಿದ್ಧಾಂತದ ಷಟ್ ಸ್ಥಲಶಾಸ್ತ್ರ, ಯೋಗಶಾಸ್ತ್ರ, ತರ್ಕಶಾಸ್ತ್ರ, ಜೋತಿಷ್ಯಶಾಸ್ತ್ರ, ವೈದ್ಯಶಾಸ್ತ್ರ ಮೊದಲಾದವುಗಳಲ್ಲಿ ಸರ್ವಜ್ಞನು ಅಪಾರವಾದ ಶಕ್ತಿ ಬಲ್ಲಿದನೆಂಬುದನ್ನು ಕಂಡುಕೊಳ್ಳಬಹುದಾಗಿದೆ. ಈತನ ವಚನಗಳ ಅಸ್ತಿತ್ವದಿಂದ ಸರ್ವಜ್ಞನು ಭಗವದ್ಗೀತೆ, ರಾಮಾಯಣ, ಮಹಾಭಾರತ ಮುಂತಾದ ಗ್ರಂಥಗಳ ಸಾರವನ್ನು ಅರಿತುಕೊಂಡಿದ್ದಾನೆಂದು ತಿಳಿದು ಬರುತ್ತದೆ.

ಶಿವನನ್ನು ಎಚ್ಚರಿಸುವುದೇ ಮಾನವನ ಬಾಳಿನ ಮುಖ್ಯ ಗುರಿ. ಈ ಗುರಿ ಸಾಧನೆಗೆ ಬೋಧಿಸಿದ ಜಗತ್ತಿನ ಮಹದಾರ್ಶನಿಕರಲ್ಲಿ 16ನೇ ಶತಮಾನದ ಪೂರ್ವದ ಸರ್ವಜ್ಞ ಕವಿಗಳಳೊಬ್ಬರಾಗಿದ್ದಾರೆ. “ಆಡು ಮುಟ್ಟದ ಗಿಡವಿಲ್ಲ” ಎಂಬಂತೆ ಸರ್ವಜ್ಞರು ಚಿತ್ರಿಸದ ಯಾವ ವಸ್ತುವೂ ಇಲ್ಲ ಜಗತ್ತಿನಲ್ಲಿರುವುದೆಲ್ಲವೂ ಅವರ ತ್ರಿಪದಿಗಳಲ್ಲಿ ಅಡಗಿದೆ ಅವನೊಬ್ಬ ಕನ್ನಡದ ಮಹಾಕವಿಯೆಂದು ಸಹಜವಾಗಿ ಒಪ್ಪಿಕೊಳ್ಳಬಹುದಾಗಿದೆ. ಈತನು ಮನಶಾಸ್ತ್ರಜ್ಞನಾಗಿ ಶಿಕ್ಷಣತಜ್ಞರಲ್ಲಿ ಸಮಾವೇಶಗೊಳ್ಳುತ್ತಾನೆ. ಸರ್ವಜ್ಞನ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳು ವಿನಯವನ್ನು ಸಾಧಿಸಬೇಕಾದರೆ ದಂಡ ಪ್ರಯೋಗದ ಅವಶ್ಯವಿಲ್ಲವೆಂಬುದು ಕಂಡುಬರುತ್ತದೆ. ಆದರೆ ಮಕ್ಕಳು ನಮ್ಮ ಜೀವನವೆಂಬ ಕುರುಡು ಪ್ರೇಮದಿಂದ ಅವರು ಹೇಗಿದ್ದರೂ ಅವರಿಗೆ ದಂಡನೆಯು ಬೇಡವೆಂಬುವಂಥವನೂ ಅಲ್ಲ ಆದರೆ ಗುರುಗಳ ಮಾತುಗಳು ಮಕ್ಕಳಿಗೆ ಮುದ್ದು ಬರುವಂತಾದರೆ ಶಿಕ್ಷಣವು ಒಳ್ಳೇ ಸೊಗಸಾಗುವುದು ಈ ವಿಷಯದಲ್ಲಿ ಸರ್ವಜ್ಞನ ಭಾವವನ್ನು ನಾವು ಅರಿತುಕೊಳ್ಳಬಹುದು “ಉದ್ದಿನ ಒಡೆ ಲೇಸು, ಬುದ್ಧಿಯಾ ನುಡಿಲೇಸು! ಬಿದ್ದೊಡನೆ ಕೈಗೆ ಬರಲೇಸು ಶಿಶುವಿಗೆ! ಮುದ್ದಾಟಲೇಸು!

ಗರ್ವದಿಂದ ಆದವನೆ, ಅಲ್ಲ, ಸರ್ವರಲ್ಲಿ ಒಂದೊಂದು ನುಡಿಯನ್ನು ಕಲಿತು ವಿದ್ಯದ ಪರ್ವತವೆ ತಾನಾದ” ಎಂಬ ಸರ್ವಜ್ಞನಿ, ಪರಮಾತ್ಮ, ಪರಬ್ರಹ್ಮ, ಶಿವ, ಬುದ್ಧ, ಜಿನ; ಕನ್ನಡ ಕವಿಯ ಅಂಕಿತ, ಮೊದಲಾದ ಅರ್ಥಗಳಿವೆ. ‘ಸರ್ವಜ್ಞ ಎಂಬುದು ಇಟ್ಟ ಹೆಸರೇ ಅಥವಾ ಕೊಟ್ಟ ಹೆಸರೇ ಅಂತೂ ‘ಸರ್ವಜ್ಞನಮೂರ್ತಿ’ ‘ಸರ್ವಜ್ಞನಾದ’ ನದಿಮೂಲ, ಋಷಿಮೂಲ, ಗುರುಮೂಲವನ್ನೂ ನೋಡಬಾರದಂತೆ ಹಾಗೆಯೇ ಸರ್ವಜ್ಞನರ ಮೂಲವೂ ಅಷ್ಟೇ ನೋಡಬಾರದು, ಅಲ್ಪದರಲ್ಲಿ ಕಲ್ಪವೆಂಬಂತೆ ಸ್ವಲ್ಪ ಮಾತಿನಲ್ಲಿಯೇ ವಿಶ್ವರೂಪದ ವಿಚಾರವನ್ನು ಕನ್ನಡದ ತ್ರಿಪದಿಯಲ್ಲಿ ತಿಳಿಸಿದ್ದಾರೆ. ಮೂರು ಸಾಲಿನ ಪದ್ಯದಲ್ಲಿ ನೂರು ಸಾಲಿನ ಅರ್ಥವಿದೆ, ಸಾವಿರ ಸಾಲಿನ ತಾತ್ಪರ್ಯವಿದೆ. ಹತ್ತು ಸಾವಿರ ಸಾಲಿನ ಧ್ವನಿಯಿದೆ, ಆದ್ದರಿಂದಲೇ ಸರ್ವಜ್ಞ ಮಹಾಶಯ “ತ್ರಿಪದಿಗಳ ಬ್ರಹ್ಮ” ಎಂದು ಬಿರುದಿಗೆ ಪಾತ್ರರಾಗಿದ್ದಾರೆ, ಕೆಲವರು ತಮ್ಮ ಊರಿನಿಂದ ಹೆಸರುಪಡೆದು ಸಾರ್ಥಕರಾದರೆ ಮತ್ತೆ ಕೆಲವರಿಂದ ಊರು ಸಾರ್ಥಕತೆಯನ್ನು ಪಡೆದಂತೆ, ತ್ರಿಪದಿಯ ಛಂದಸ್ಸು ಸರ್ವಜ್ಞರ ವಚನಗಳಿಂದ ಕನ್ನಡದ ಕಣ್ಮಣಿಯಾಯಿತು. ಭಾರತದ ಭಾಗ್ಯವಾಯಿತು. ವಿಶ್ವ ವಿಭೂತಿಯಾಯಿತು. ಕರ್ನಾಟಕದ ರಾಜ್ಯದ ಧಾರವಾಡ ಜಿಲ್ಲೆಯ ಸೂಸೊರ ಎಂಬ



## ಕಿಲಕಿಲ



## ಭಯಂಕರ ಸೀರಿಯಸ್ ಕಥೆ ಮಾರ್ರೆ

ಸಕಲೇಶ್‌ಪುರದ ಹರೀಶ ಬಹಳ ಒಳ್ಳೆಯ ಹುಡುಗ. ಹುಡುಗರೆಂದರೆ ಸಾಮಾನ್ಯವಾಗಿ ಒಳ್ಳೆಯವರೇ ಬಿಡಿ ಕೆಲವು ಬಾರಿ ಹುಡುಗಿಯರ ಸಂಗದಿಂದ ಹಾಳಾಗ್ತಾರೆ ಬಿಟ್ರೆ, ಇಲ್ಲದೇ ಇದ್ರೆ ಚಿಪ್ಪಿನೊಳಗಿರುವ ಮುತ್ತಿನಂತೆ! ಈ ಹರೀಶನು ಕೂಡಾ ತುಂಬಾ ಮುಗ್ಧ. ತನ್ನ ಉನ್ನತ ವ್ಯಾಸಂಗಕ್ಕಾಗಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಹೊರಟ. ಮಂಗಳೂರು ವಿ.ವಿಯ ಹುಡುಗರ ಹಾಸ್ಟೆಲ್ಲಲ್ಲಿ ರೂಮು ಸಿಗದ ಕಾರಣ, ಅಸೈಗೋಳಿ ಕಾಜವ ಕೌಂಪಾಂಡ್ ಅಲ್ಲಿ ರೂಮು ಬಾಡಿಗೆಗೆ ಪಡೆದ. ಹಾಗೂ ತನ್ನ ದಿನನಿತ್ಯದ ತರಗತಿಗೆ ಅಲ್ಲಿಂದಲೇ ಹೋಗಿ ಬರುವುದು ಮಾಡುತ್ತಿದ್ದ. ಹೀಗೇ ಇರಬೇಕಾದರೆ ತನ್ನದೇ ರೂಮಿನ ಎದುರು ಭಾಗದಲ್ಲಿರುವ ಮನೆಯೊಂದರ ಹುಡುಗಿ ಜ್ಯೋತಿಯ ಪರಿಚಯವಾಗುತ್ತದೆ. ಪರಿಚಯ ಸ್ನೇಹವಾಗಿ, ಸ್ನೇಹ ಪ್ರೀತಿಗೆ ತಿರುಗಿ ಇಬ್ಬರೂ ಗಾಢವಾಗಿ ಪ್ರೀತಿಸಲು ಪ್ರಾರಂಭಿಸುತ್ತಾರೆ. ಜ್ಯೋತಿಮಧ್ಯಮ ವರ್ಗದ ಕುಟುಂಬದ ಹುಡುಗಿ. ಅಣ್ಣಾ ಬಸ್ ಕಂಡೆಕ್ಟರ್, ಅಪ್ಪ ತೀರಿ ಹೋಗಿದ್ದರು. ತಂಗಿಯನ್ನು ಬಹಳ ಪ್ರೀತಿಯಿಂದ ಸಾಕಿದ್ದ ಅಣ್ಣನಿಗೆ ಜ್ಯೋತಿ ಆಕೆಯ ಪ್ರೀತಿಯ ಬಗ್ಗೆ ತಿಳಿಸಿರಲಿಲ್ಲ ಯಾಕೆಂದರೆ ಹರೀಶನ ಜಾತಿ ಬೇರೆ ಆದದ್ದರಿಂದ ಅಂತರ್ಜಾತಿ ವಿವಾಹಕ್ಕೆ ಒಪ್ಪಲಾರರು ಎಂಬ ಅಭಿಪ್ರಾಯ.

ಒಂದು ದಿನ ಜ್ಯೋತಿ ತನ್ನ ಮೊಬೈಲ್ ಅನ್ನು ಇಟ್ಟು ಸ್ನಾನಕ್ಕೆ ಹೋಗಿದ್ದ ಸಂದರ್ಭ ಅಣ್ಣ ಆಕೆಯ ಮೊಬೈಲ್ ತೆರೆದಾಗ ಆಕೆಯ ಪ್ರೇಮ ಪ್ರಕರಣ ಹೊರ ಬೀಳುತ್ತದೆ. ಆಕೆ ಹರೀಶನ ಜೊತೆ ಮನೆ ಬಿಟ್ಟು ಓಡಿ ಹೋಗುವ ನಿರ್ಧಾರ ಮಾಡಿದ ವಿಚಾರವನ್ನು ತಿಳಿದು ಕೆಂಡಾಮಂಡಲನಾದ ಅಣ್ಣ. ಆಕೆಯ ಬಳಿ ಯಾವ ವಿಚಾರವನ್ನು ಕೇಳೋಲ್ಲ. ಆದರೆ ಅವರು ಮನೆ ಬಿಟ್ಟು ಓಡುವ ದಿನ ಗೊತ್ತುಪಡಿಸಿ ಅಂದು ರಜೆ ಹಾಕಿ ಅಸೈಗೋಳಿ ಜಂಕ್ಷನ್‌ನಲ್ಲಿ ಕಾದು ಕುಳಿತ. ಆಕೆ ತನ್ನ ಮರ್ಯಾದೆ ತೆಗೆದಳು ಇಬ್ಬರನ್ನೂ ಮುಗಿಸಿಬಿಡುವೆ ಎಂದು ಕಬ್ಬಿಣದ ರಾಡು ಹಿಡಿದು ಆಕೆಯ ಅಣ್ಣ ಹೊಂಚು ಹಾಕಿ ಕುಳಿತಿದ್ದ. ಇತ್ತ ಹರೀಶ ಮೊದಲೇ ನಿರ್ಧಾರವಾದಂತೆ ಕೊಣಾಜೆಯ ಹುಡುಗನಿಂದ ಬೈಕ್ ಒಂದನ್ನು ಪಡೆದು ಜ್ಯೋತಿಯನ್ನು ಪಿಕಪ್ ಮಾಡಿ, ಅವರು ಅಸೈಗೋಳಿ ದಾಟಿ ಒಂದು ಚೂರು ಮುಂದೆ ಸಾಗುತ್ತಿದ್ದಂತೆ ಹಿಂದಿನಿಂದ ಆಕೆಯ ಅಣ್ಣ ತನ್ನ ಕೈಲಿದ್ದ ಕಬ್ಬಿಣದ ರಾಡಿನಿಂದ ಜ್ಯೋತಿಯ ತಲೆಗೆ ಬಲವಾದ ಏಟು ಕೊಟ್ಟಿದ್ದ. ಆತನಿಂದ ಬಿದ್ದ ಏಟಿಗೆ ಆಕೆ ಬದುಕುಳಿವುದೇ ಅನುಮಾನ. ಆದರೂ ಏನೂ ಆಗಿಲ್ಲ ಯಾಕೆ ಗೊತ್ತಾ? ಇದು ಕರ್ನಾಟಕ ಸ್ವಾಮಿ, ಇಲ್ಲಿ ಹಿಂಬದಿಯ ಸವಾರನಿಗೂ ಹೆಲ್ಮೆಟ್ ಕಡ್ಡಾಯ. ಆಕೆಯೂ ಹೆಲ್ಮೆಟ್ ಧರಿಸಿದ್ದಳು. ಬಿದ್ದ ಏಟಿಗೆ ಹೆಲ್ಮೆಟ್ ಒಡೆಯಿತೇ ಹೊರತು ತಲೆ ಏನೂ ಆಗಿಲ್ಲ. ಒಂದು ಹೆಲ್ಮೆಟ್ ಹುಡುಗಿಯ ಜೀವ ಹಾಗೂ ಪ್ರೇಮ ಉಳಿಸಿತು.

**ಕಥೆಯ ನೀತಿ : ಹೆಲ್ಮೆಟ್ ಧರಿಸಿರಿ ಹುಡುಗಿಯರ ತಲೆ ಉಳಿಸಿ**

**- ವಾಟ್ಸ್ ಆ್ಯಪ್**

ಕವನ

### ನೈಜಪಥ

ಈ ಜಗವೊಂದು ಬೆಳ್ಳಿಕಿರಣ
ವೃಥಾ ಮಾಡದಿರು ಕಾಲಹರಣ
ಬಂದಾಗ ನಿನಗೆ ಮರಣ
ಮುಗಿಯದಿಲ್ಲಿ ಸುಖದ ಚರಣ

### ಪ್ರೇಮದಾಳ

ಈ ಪ್ರೀತಿ ಸಾಗರದ ತಳ
ಅದರ ನೀತಿಯೊಂದು ಕಾಲ
ಒಲವ ಪಡೆದರೆ ಸಾಲ
ಸಂದಾಯ ಮಾಡದಿದ್ದರೆ ಬಿಡದು ಅದರ ಜಾಲ

**- ಮಹಮ್ಮದ್ ಮುಸ್ತಫಾ, ಬೆಳ್ಳಾರೆ**


### ತಿಳಿ - ಬೆಳಿ

ದುಷ್ಟ ಗುಣಗಳನು ಕಲಿ ।
ಶಿಷ್ಠ ಗುಣಗಳ ಉಳಿ ।
ಜೀವನಲ್ಲಿ ದಾಟು ಹೊಳಿ ।
ಆಗು ನೀ ಮಾನವತ್ವದ ತಳಿ ।
ನಾನಾರೆಂಬುದನ್ನು ತಿಳಿ ।
ನಾನೆಂಬ ಅಹಂಕಾರ ಕಲಿ ।
ಎಲ್ಲರೊಡನೆ ಒಂದಾಗಿ ಬೆಳಿ ।
ಆಗು ನೀ ಸಿದ್ದಾರೂಢರ ತಳಿ ।
ಗ್ರಾಮಾಭಿವೃದ್ಧಿಗೆ ಪಣ ತೊಡಿ ।
ಸರಾಯಿ ಶೇಂಧಿ ಬಿಟ್ಟು ಬಿಡಿ ।
ಮಹಾತ್ಮ ಗಾಂಧಿಜೀ ತತ್ವ ಹಿಡಿ ।
ಅಂದಾಗ ಆಗುತಿ ನೀ ಮಡಿ -ಉಡಿ ।
ಪರಿಸರ ಉಳಿದರೆ ಆಗುತ್ತದೆ ಮಳೆ ।
ವಿವಿಧ ಬೀಜಗಳ ಬಿತ್ತಿ ಬೆಳೆ ।
ರೈತ ********* ಜಗವೆಲ್ಲ ।

**- ಪಿ.ಡಿ. ವಾಲಿಕಾರ**
**ಬದಮಿ, ಬಾಗಲಕೋಟೆ**

# ಅತೀ ಬೆವರಿದರೆ ಸಮಸ್ಯೆ!

– ರಸಿಕಾ ಪಿ.



ಬೆವರುವಿಕೆ ದೇಹದ ಉಷ್ಣತೆಯನ್ನು ಕಾಯ್ದುಕೊಳ್ಳಲು ದೇಹವೇ ಕಂಡುಕೊಂಡ ಒಂದು ರಕ್ಷಣಾ ವಿಧಾನ. ದೇಹ ಬಿಸಿಯಾದಾಗ ಬೆವರು ಕಾಣಿಸಿಕೊಂಡು ದೇಹ ತಣ್ಣಗಾಗುತ್ತದೆ. ಆದರೆ, ಅತೀ ಬೆವರುವಿಕೆ ಸಮಸ್ಯೆ ಇರುವವರಲ್ಲಿ ಶರೀರ ಯಾವತ್ತೂ ಬೆವರುತ್ತ ಸಮಸ್ಯೆಗಳು ಎದುರಾಗುತ್ತವೆ.

ಮಲ್ಟಿ ನೇಷನಲ್ ಕಂಪೆನಿಯೊಂದರ ಸಂಪೂರ್ಣ ಏಸಿ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದರೂ ಪ್ರಿಯಾಂಕ ರಾಣಿ ಆಗಾಗ್ಗೆ ತನ್ನ ಕರ್ಚೀಪಿನಿಂದ ಕೈ ಒರೆಸಿಕೊಳ್ಳಬೇಕು ಅಥವಾ ಎದ್ದು ವಾಶ್‌ರೂಮಿಗೆ ಹೋಗಿ ಕೈ ತೊಳೆದುಕೊಂಡು ಬರಬೇಕಾಗುತ್ತದೆ. ಇದು ಆಕೆಗೆ ಬಹು ಕಿರಿಕಿರಿಯ ಕೆಲಸವಾದರೂ ಮಾಡದೆ ವಿಧಿಯಿಲ್ಲ. ಪ್ರಿಯಾಂಕ ರಾಣಿ ಅತೀ ಬೆವರಿನ ಸಮಸ್ಯೆಯಿಂದ ಬಳಲುತ್ತಿದ್ದಾರೆ.

ನಮ್ಮ ಶರೀರ ಪ್ರತೀ ಕ್ಷಣವೂ ಕಾರ್ಯನಿರತವಾಗಿರುವುದರಿಂದ ಉಷ್ಣಾಂಶ ಹೆಚ್ಚಿ ಶರೀರದ ನೀರಿನಾಂಶ ಚರ್ಮದ ರಂಧ್ರಗಳ ಮೂಲಕ ಆವಿಯ ರೂಪದಲ್ಲಿ ಹೊರಬರುತ್ತದೆ. ಇದೇ ಬೆವರು. ಬೆವರುವಿಕೆ ದೇಹದ ಉಷ್ಣತೆಯನ್ನು ಕಾಯ್ದುಕೊಳ್ಳಲು ದೇಹವೇ ಕಂಡುಕೊಂಡ ಒಂದು ರಕ್ಷಣಾ ವಿಧಾನ. ದೇಹ ಬಿಸಿಯಾದಾಗ ಬೆವರು ಕಾಣಿಸಿಕೊಂಡು ದೇಹ ತಣ್ಣಗಾಗುತ್ತದೆ. ಸಾಮಾನ್ಯಕ್ಕಿಂತ ಹೆಚ್ಚು ವೇಗ ಅಥವಾ ಪ್ರಯಾಸದ ಚಟುವಟಿಕೆ ನಡೆಸಿದಾಗ, ವಾತಾವರಣದ ಉಷ್ಣಾಂಶ ಸಾಮಾನ್ಯಕ್ಕಿಂತ ಹೆಚ್ಚಿದಾಗ ಬೆವರುವ ಪ್ರಮಾಣ ಹೆಚ್ಚಿರುತ್ತದೆ. ಹಾಗೆಯೇ ಚಳಿ ವಾತಾವರಣದಲ್ಲಿ ಬೆವರು ಅತ್ಯಂತ ಕಡಿಮೆ ಇರುತ್ತದೆ. ಆದರೆ, ಅತೀ ಬೆವರುವಿಕೆ ಸಮಸ್ಯೆ ಇರುವವರಲ್ಲಿ ಈ ಎಲ್ಲಾ ಅಂಶಗಳನ್ನು ಮೀರಿ ಶರೀರ ಯಾವತ್ತೂ ಬೆವರುತ್ತಿರುತ್ತದೆ. ದೇಹ ಅಗತ್ಯವಿಲ್ಲದಿದ್ದಾಗಲೂ ಬೆವರುತ್ತದೆ.

ಅತೀ ಬೆವರುವಿಕೆ ಸಾಮಾನ್ಯವಾಗಿ ಹಸ್ತ, ಅಂಗಾಲು, ಕಂಕುಳ, ತೊಡೆ ಸಂದು ಮತ್ತು ತಲೆ ಭಾಗದಲ್ಲಿ ಕಾಣಿಸಿಕೊಳ್ಳುತ್ತದೆ. ದೇಹದ ಉಳಿದ ಭಾಗಗಳು ಸಾಮಾನ್ಯವಾಗಿರುತ್ತವೆ. ಆದರೆ, ಅತೀ ಬೆವರುವಿಕೆಯಿಂದಾಗಿ ವ್ಯಕ್ತಿಯ ದೈನಂದಿನ ಚಟುವಟಿಕೆಗಳಿಗೆ ಅಡೆತಡೆವುಂಟಾಗುತ್ತದೆ. ಪುಸ್ತಕ, ಪತ್ರಿಕೆ ಹಿಡಿದು ಓದುವಾಗ ಬೆವರು ನೀರಿನಂತೆ ಸುರಿದು ಹಾಳೆಗಳು ಒದ್ದೆಯಾಗುತ್ತದೆ. ಹಸ್ತಗಳು ಎಷ್ಟು ಒದ್ದೆಯಾಗಿರುತ್ತವೆಯೆಂದರೆ ಪೆನ್ನು, ಬಾಗಿಲು ಹಿಡಿ, ಕಂಪ್ಯೂಟರ್ ಮೌಸ್ ಮೊದಲಾಗಿ ಯಾವುದೇ ವಸ್ತುಗಳನ್ನು ಹಿಡಿಯಲು ಪ್ರಯತ್ನ ಪಟ್ಟರೆ ಜಾರುತ್ತವೆ. ಅಂಗಾಲುಗಳು ಒದ್ದೆಯಾಗುವುದರಿಂದ ಶೂ, ಚಪ್ಪಲಿ ಹಾಕಿಕೊಂಡು ನಡೆಯುವುದು ಕಷ್ಟಕರವಾಗುತ್ತದೆ. ಕಂಕುಳಗಳ ಭಾಗದಲ್ಲಿ ಬಟ್ಟೆ ವಿಪರೀತ ಒದ್ದೆಯಾಗಿ ಬೆವರಿನ ಗುರುತು ಸ್ಪಷ್ಟವಾಗಿ ಕಾಣಿಸುತ್ತದೆ. ಇದೆಲ್ಲಕ್ಕಿಂತ ಹೆಚ್ಚಾಗಿ, ಅತೀ ಬೆವರುವಿಕೆಯಿಂದಾಗಿ ಚರ್ಮದ ಸೋಂಕುಗಳು ಕಾಣಿಸಿಕೊಳ್ಳುತ್ತವೆ.

ವಿಶ್ವದಲ್ಲಿ ಎಷ್ಟು ಪ್ರಮಾಣದ ಜನರಲ್ಲಿ ಅತೀ ಬೆವರುವಿಕೆ ಸಮಸ್ಯೆ ಇದೆಯೆಂದು ತಿಳಿದು ಬರುವುದಿಲ್ಲ. ಏಕೆಂದರೆ, ಕೆಲವರು ಇದನ್ನೊಂದು ಸಮಸ್ಯೆ ಎಂದು ಬಗೆಯುವುದಿಲ್ಲ. ಹಾಗಾಗಿ, ವೈದ್ಯರ ಬಳಿ ಇದರ ಉಪಶಮನಕ್ಕೆ ಹೋಗುವುದಿಲ್ಲ. ಕೆಲವರು ಇದು ಸಮಸ್ಯೆ ಎಂದು ತಿಳಿದರೂ ಸಂಕೋಚದಿಂದ ಇನ್ನೊಬ್ಬರ ಬಳಿ ಹೇಳಿಕೊಳ್ಳುವುದಿಲ್ಲ. ಇದು ವಯಸ್ಸು ಮತ್ತು ಲಿಂಗಭೇದವಿಲ್ಲದೆ ಕಾಣಿಸಿಕೊಳ್ಳುತ್ತದೆ. ಹೆಚ್ಚಿನವರಲ್ಲಿ ಇದು ಚಿಕ್ಕ ಪ್ರಾಯದವರಾಗಿರುವಾಗಲೇ ಕಾಣಿಸಿಕೊಳ್ಳುತ್ತದೆ. ಉಷ್ಣಾಂಶ ಹೆಚ್ಚಿರುವ ಪ್ರದೇಶಗಳಲ್ಲಿ ಮಾತ್ರವಲ್ಲದೆ, ಉಷ್ಣಾಂಶ ಹೆಚ್ಚಿರುವ ಪ್ರದೇಶಗಳಲ್ಲಿ ಮಾತ್ರವಲ್ಲದೆ, ಶೀತ ಪ್ರದೇಶಗಳಲ್ಲೂ ಇದು ಕಾಣಿಸಿಕೊಳ್ಳುತ್ತದೆ.

ಕೆಲವು ವಿಶೇಷ ಪರಿಸ್ಥಿತಿ, ಅನಾರೋಗ್ಯ ಅತೀ ಬೆವರುವಿಕೆಗೆ ಕಾರಣವಾಗಬಲ್ಲದು. ಸಿಹಿಮೂತ್ರ ರೋಗ ಮತ್ತು ಕಾಲ ಹೆಬ್ಬೆರಳಿನ ಗಂಟಿನ ಕಾಯಿಲೆ (ಗೌಟ್) ಅತೀ ಬೆವರುವಿಕೆಗೆ ಕಾರಣವಾಗಬಹುದು. ಥೈರಾಯಿಡ್ ಸಮಸ್ಯೆಯೊಂದಿಗೆ ಅತೀ ಬೆವರುವಿಕೆ ಕಾಣಿಸಿಕೊಳ್ಳುವುದಿದೆ. ಔಷಧಿಯ ಮೂಲಕ ಥೈರಾಯಿಡ್ ಸಮಸ್ಯೆ ಗುಣವಾದಾಗ ಅತೀ ಬೆವರುವಿಕೆ ಸಮಸ್ಯೆಯೂ ಗುಣವಾಗುತ್ತದೆ. ಹೃದ್ರೋಗ ವಿರುವವರಲ್ಲಿ ಅತೀ ಬೆವರುವಿಕೆ ಅತ್ಯಂತ ಸಾಮಾನ್ಯ. ಸ್ತ್ರೀಯರು ಮುಟ್ಟಾದಾಗ ಅತಿ ಬೆವರು ಕಾಣಿಸಿಕೊಳ್ಳಬಹುದು. ಮುಟ್ಟಿನ ಪ್ರಾರಂಭದಲ್ಲಿ ಕಾಣಿಸಿಕೊಳ್ಳುವ ಅತೀ ಬೆವರುವಿಕೆ ಮುಟ್ಟು ನಿಂತಾಗಲೂ (ಮೆನೋಪೌಸ್) ಅತೀ ಬೆವರುವಿಕೆ ಕಾಣಿಸಿಕೊಳ್ಳಬಹುದು. ಗರ್ಭ ಧರಿಸಿದಾಗ ಅತೀ ಬೆವರುವಿಕೆ ಕಾಣಿಸಿಕೊಳ್ಳಬಹುದು. ಹೆರಿಗೆಯಾಗುತ್ತಲೇ ಸಮಸ್ಯೆ ಇಲ್ಲವಾಗುತ್ತದೆ. ಕಡಿಮೆ ರಕ್ತದೊತ್ತಡವಿದ್ದಾಗ ಅತೀ ಬೆವರುವಿಕೆ ಅಗತ್ತಯ ಕಾಣಿಸಿಕೊಳ್ಳುತ್ತದೆ.

ಕೆಲವು ನರಗಳ ಮೂಲಕ ಸಂಜ್ಞೆಗಳನ್ನು ಪಡೆಯುವ ಮಿದುಳು ಅದಕ್ಕನುಸಾರವಾಗಿ ಶರೀರಕ್ಕೆ ಬೆವರಲು ಸೂಚಿಸುತ್ತದೆ. ಈ ನರಗಳು ಅಗತ್ಯಕ್ಕಿಂತ ಹೆಚ್ಚು ಕಾರ್ಯ ನಡೆಸುವುದು. ಅತೀ ಬೆವರಿನ ಸಮಸ್ಯೆಗೆ ಕಾರಣವಾಗಿರಬಹುದು ಎಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ. ಈ ಕುರಿತು ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯುತ್ತವೆ.

ಆರೈಕೆ

ಅತೀ ಬೆವರುವಿಕೆ ಸಮಸ್ಯೆಗೆ ಚರ್ಮ ತಜ್ಞ(ಡೆರ್ಮಾಟಲಾಜಿಸ್ಟ್)ರು ವಿವಿಧ ರೀತಿಯ ಉಪಚಾರಗಳನ್ನು ಸೂಚಿಸುತ್ತಾರೆ. ಯಾವುದೇ ಚಿಕಿತ್ಸೆಯನ್ನು ಸೂಚಿಸುವ ಮೊದಲು ಅವರು ಅತೀ ಬೆವರುವಿಕೆ ಸಮಸ್ಯೆ ಶರೀರದ ಯಾವ ಭಾಗಗಳಲ್ಲಿ ಇದೆ ಮತ್ತು ಇದಕ್ಕೆ ಯಾವುದಾದರೂ ಕಾಯಿಲೆ ಅಥವಾ ಔಷಧಿಯ ಸೇವನೆ ಕಾರಣವೇ ಅಲ್ಲವೇ ಎಂಬುದನ್ನು ಖಾತರಿ ಮಾಡಿಕೊಳ್ಳುತ್ತಾರೆ.

ಆಂಟಿ ಪರ್ಸ್ಪಿರೆಂಟ್ : ಪ್ರಪ್ರಥಮ ಚಿಕಿತ್ಸೆಯಾಗಿ ಆಂಟಿಪರ್ಸ್ಪಿರೆಂಟ್‌ನ್ನು ಸೂಚಿಸಲಾಗುತ್ತದೆ. ಇದನ್ನು ಬೆವರುವ ಭಾಗಗಳಿಗೆ ಹಚ್ಚಿದಾಗ ಬೆವರುವಿಕೆ ನಿಯಂತ್ರಣಕ್ಕೆ ಬರುತ್ತದೆ.

ಐಯಾಂಟೋಫೋರೋಸಿಸ್ : ಕೈ ಅಥವಾ ಕಾಲನ್ನು ನೀರಲ್ಲಿ ಮುಳುಗಿಸಿ ಒಂದು ವೈದ್ಯಕೀಯ ಸಾಧನದ ಮೂಲಕ ಲೋ ವೋಲ್ಟೇಜ್ ವಿದ್ಯುತ್ತನ್ನು ಹಾಯಿಸಲಾಗುತ್ತದೆ. ಹೀಗೆ ಮಾಡುವುದರಿಂದ ಅತೀಯಾಗಿ ಬೆವರುವ ಚರ್ಮರಂಧ್ರಗಳು ತಾತ್ಕಾಲಿಕವಾಗಿ ಮುಚ್ಚಲ್ಪಡುತ್ತವೆ. ಈ ಕ್ರಮವನ್ನು ಕೆಲವು ದಿನಗಳ ತನಕ ಮಾಡಬೇಕಾಗುತ್ತದೆ.

ಬೋಟುಲಿನವ್ ಇಂಜೆಕ್ಷನ್ : ಕಂಕುಳದ ಹಲವು ಭಾಗಗಳಲ್ಲಿ ಈ ಇಂಜೆಕ್ಷನ್ ಚುಚ್ಚಲಾಗುತ್ತದೆ. ಈ ಇಂಜೆಕ್ಷನ್ ಚುಚ್ಚಿದಾಗ ಬೆವರು ಗ್ರಂಥಿಗಳನ್ನು ಪ್ರಚೋದಿಸುವ ರಾಸಾಯನಿಕ ಮತ್ತು ತಡೆಹಿಡಿಯಲ್ಪಟ್ಟು ಅತೀ ಬೆವರುವಿಕೆ ನಿಯಂತ್ರಣಕ್ಕೆ ಬರುತ್ತದೆ. ಇಂಜೆಕ್ಷನ್ ಚುಚ್ಚಿದ 4–5 ದಿನಗಳಲ್ಲಿ ಬೆವರುವಿಕೆ ನಿಯಂತ್ರಣಕ್ಕೆ ಬಂದು 4–6 ತಿಂಗಳ ತನಕ ಈ ಸಮಸ್ಯೆ ಇರುವುದಿಲ್ಲ. ನಂತರ ಪುನಃ ಈ ಇಂಜೇಕ್ಷನ್ ಹಾಕಿಸಿಕೊಳ್ಳಬೇಕಾಗುತ್ತದೆ.

ಶಸ್ತ್ರ ಚಿಕಿತ್ಸೆ : ಮೇಲೆ ಹೇಳಿದ ಎಲ್ಲಾ ಚಿಕಿತ್ಸೆಗಳು ನಿರೀಕ್ಷಿತ ಫಲಿತಾಂಶ ನೀಡದಿದ್ದರೆ ಕೊನೆ ಕ್ರಮವಾಗಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಈ ಕ್ರಮದಲ್ಲಿ ಕಂಕುಳಿನ ಭಾಗದ ಬೆವರು ಗ್ರಂಥಿಗಳನ್ನು ಶಾಶ್ವತವಾಗಿ ತೆಗೆಯಲಾಗುತ್ತದೆ.

ಅತೀ ಬೆವರುವಿಕೆ ಸಮಸ್ಯೆ ಇರುವವರು ಸಾಧ್ಯವಾದಷ್ಟು ಶೂಗಳ ಬದಲು ಸ್ಯಾಂಡಲ್, ಚಪ್ಪಲಿಗಳನ್ನು ಬಳಸಿ, ಪಾದರಕ್ಷೆಗಳು ಚರ್ಮದಂತಹ ನೈಸರ್ಗಿಕ ವಸ್ತುಗಳಿಂದ ತಯಾರಿಸಿದ್ದಾಗಿರಲಿ. ಶೂ ಧರಿಸಲೇ ಬೇಕಿದ್ದರೆ ಸಾಧ್ಯವಾದಲ್ಲೆಲ್ಲ ನಡು ನಡುವೆ ಅವುಗಳನ್ನು ತೆಗೆದಿರಿಸಿ.

ಒಂದೇ ಜೊತೆ ಶೂ ಅನ್ನು ಸತತ ಎರಡು ದಿನ ಧರಿಸಬೇಡಿ

ಬೆವರನ್ನು ಹೀರಿಕೊಳ್ಳುವ ಸಾಕ್ಸ್‌ಗಳನ್ನು ಧರಿಸಿ. ಪ್ರತಿಧಿನ ಸಾಕ್ಸ್‌ಗಳನ್ನು ಬದಲಾಯಿಸಿ

ಪ್ರತೀದಿನ ಮಲಗುವ ಮೊದಲು ಪಾದಗಳಿಗೆ ಪಸ್ಪಿರೆಂಟ್ ಹಚ್ಚಿಕೊಳ್ಳಿರಿ

ಮರುದಿನ ಬೆಳಿಗ್ಗೆ ಸ್ನಾನ ಮಾಡುವಾಗ ಚೆನ್ನಾಗಿ ತೊಳೆಯಿರಿ. ಮೊದಲು 3–4 ರಾತ್ರಿ ನಿರಂತರವಾಗಿ ಮಾಡಿ ನಂತರ ವಾರಕ್ಕೊಮ್ಮೆ ಮಾಡಿ.

ಕೃಪೆ : ಗುರುತು



# ಕಿಲಕಿಲ



ಅಫ್ಘಾನಿಸ್ತಾನದಲ್ಲಿ ವರದಿ ಮಾಡುತ್ತಿದ್ದ ಪತ್ರಕರ್ತೆ ಅಲ್ಲಿನ ಸ್ತ್ರೀಯರು ತಮ್ಮ ಗಂಡಂದಿರಿಗಿಂತ ಹತ್ತು ಹೆಜ್ಜೆ ಹಿಂದೆ ನಡೆದು ಬರುವ ಸಂಪ್ರದಾಯವನ್ನು ನೋಡಿ, "ನೀವು ಅಫ್ಘಾನಿಸ್ತಾನದ ಸ್ತ್ರೀಯರು ತಮ್ಮ ಗಂಡಂದಿರಿಗೆ ಎಷ್ಟು ಗೌರವ ನೀಡುತ್ತಿರಿ ನನಗೆ ನಿಜಕ್ಕೂ ಬಹಳ ಮೆಚ್ಚುಗೆಯಾಯಿತು. ಇದಕ್ಕೆ ಕಾರಣವೇನಾದರೂ ಇದೆಯೇ? ಎಂದು ಒಬ್ಬಳು ಅಫ್ಘಾನಿ ಮಹಿಳೆಯನ್ನು ಕೇಳಿದರು. ಅದಕ್ಕೆ ಮಹಿಳೆ "ಹೌದು, ನೆಲಬಾಂಬುಗಳು" ಎಂದು ಅವಳ ಕಿವಿಯಲ್ಲಿ ಉಸಿರಿದಾಗ ಅವಳಿಗೆ ತನ್ನ ಕಿವಿಗಳನ್ನೇ ನಂಬಲಾಗಲಿಲ್ಲ!

*****

ಬಾಬಾ ರಾಮ್‌ದೇವ್‌ರ ಪತಂಜಲಿ ಕಂಪೆನಿ ಈಗ ಕೋಟಿ ರೂಪಾಯಿಗಳ ಬೃಹತ್ ಕಂಪೆನಿಯಾಗಿ ಬಿಸ್ಕಿಟ್, ಸಾಬೂನು ಮತ್ತು ನೂಡಲ್ಸ್‌ಗಳನ್ನೂ ಯಶಸ್ವಿಯಾಗಿ ಮಾರುತ್ತಿದೆ. ಈ ಮೂಲಕ ರಾಮ್‌ದೇವ್ ಒಂದು ಕಂಪೆನಿಯ ಯಶಸ್ವಿಗೆ ಅರೆಬೆತ್ತಲೇ ಮಾದಕ ಸುಂದರ ಹೆಣ್ಣುಗಳೇ ಬೇಕಿಲ್ಲ, ಅರೆಬೆತ್ತಲೆ ಸನ್ಯಾಸಿಯೂ ಸಾಕು ಎಂಬುವುದನ್ನು ಸಾಬೀತು ಪಡಿಸಿದ್ದಾರೆ!

*****

ಟೀಚರ್ : "ಮಕ್ಕಳೇ, ಪೃಥ್ವಿ ಯಾರ ಸುತ್ತ ತಿರುಗುತ್ತದೆ?
ವಿದ್ಯಾರ್ಥಿಗಳು : ಸೂರ್ಯ
ಟೀಚರ್ : "ಪೃಥ್ವಿಯ ಸುತ್ತ ಯಾರು ತಿರುಗುತ್ತಾರೆ?
ವಿದ್ಯಾರ್ಥಿಗಳು : ನರೇಂದ್ರ ಮೋದಿ!!

*****

ಒಬ್ಬ ವ್ಯಕ್ತಿ ಕೈಯಲ್ಲಿ ಗನ್ ಮತ್ತು 2 ಲಕ್ಷ ರೂಪಾಯಿ ಗಂಟು ಹಿಡಿದುಕೊಂಡು ಬ್ಯಾಂಕಿನೊಳಗೆ ಬಂದ. ಅವನು ಒಳಗೆ ಬರುತ್ತಲೇ ಗಾಳಿಯಲ್ಲಿ ಗುಂಡು ಹಾರಿಸಿ, "ಯಾರು ಎಲ್ಲೆಲ್ಲಿ ಕುಳಿತ್ತಿದ್ದೀರೋ ಅಲ್ಲೇ ಕುಳಿತಿರಬೇಕು. ಒಂದು ವೇಳೆ ಯಾರಾದರೂ ಕುಳಿತಲ್ಲಿಂದ ಎದ್ದು ಬಂದು ಲೈಫ್ ಇನ್ಸುರೆನ್ಸ್ ತೆಗೆದುಕೊಳ್ಳಿ, ಎಸ್‌ಐಪಿ ತೆಗೆದುಕೊಳ್ಳಿ, ಫಿಕ್ಸೆಡ್ ಡೆಪಾಸಿಟ್ ಇಡಿ, ಆ ಕಂಪೆನಿ ಶೇರ್‌ನಲ್ಲಿ ಇನ್ವೆಸ್ಟ್ ಮಾಡಿ, ಈ ಕಂಪೆನಿ ಶೇರ್‌ನಲ್ಲಿ ಇನ್ವೆಸ್ಟ್ ಮಾಡಿ ಅಂತ ಏನಾದರೂ ಪೂಸಿ ಹೊಡೆಯಲು ಬಂದರೆ ಹುಷಾರ್, ಗುಂಡು ಹೊಡೆದುಬಿಡುತ್ತೇನೆ. ನಾನು ಈ ಎರಡು ಲಕ್ಷ ರೂಪಾಯಿಯನ್ನು ನನ್ನ ಅಕೌಂಟ್‌ನಲ್ಲಿ ಡೆಪಾಸಿಟ್ ಮಾಡಲು ಬಂದಿದ್ದೇನೆ, ಅಷ್ಟೇ! ಎಂದು ಹೇಳಿದಾಗ ಎಲ್ಲರೂ ಒಮ್ಮೆ ನಿಟ್ಟುಸಿರು ಬಿಟ್ಟರು!

*****

ಪಕ್ಕದ ಮನೆಯಿಂದ ಓಡಿ ಅಜ್ಜಿಯ ಬಳಿ ಬಂದ ಮೊಮ್ಮಗ,
'ಅಜ್ಜಿ, ಒಂದು ಸಾರಿ ಜೋರಾಗಿ 'ಢಂ' ಅಂತ ಹೇಳು ನೋಡೋಣ" ಎಂದನು.
ಅದಕ್ಕೆ ಅಜ್ಜಿ ಯಾಕೆ? ಅಂತ ಕೇಳಿದಾಗ,
"ಹೇಳ್ತೀನೆ, ಒಂದು ಸಾರಿ ಜೋರಾಗಿ "ಢಂ" ಅನ್ನು" ಎಂದನು. ಅದರಂತೆ ಅಜ್ಜಿ ಜೋರಾಗಿ 'ಢಂ' ಎಂದಳು. ಆಗ ಮೊಮ್ಮಗ,
"ಯಾಕೆಂದರೆ, ಅಮ್ಮ ಪಕ್ಕದ ಮನೆಯಲ್ಲಿ ಕುಳಿತು ನಮ್ಮನೆ ಮುದುಕಿ ಯಾವಾಗ 'ಢಂ' ಅನ್ನುವೆ ಅಂತ ಕಾಯ್ತಿದ್ದೀನಿ ಅಂತ ಹೇಳುತ್ತಿದ್ದಳು. ಅದಕ್ಕೆ..."ಅಂದಾಗ ಮುದುಕಿ ತನ್ನ ಬೊಕ್ಕ ಬಾಯಿಯನ್ನು ತೆರದು ಹಾಂ! ಅಂದಳು

*****

ಹೆಣ್ಣು ನೋಡಲು ಹೋದ ವರನಿಗೆ ಹುಡುಗಿಯ ತಂದೆ ಕೇಳಿದರು.
ಉದ್ಯೋಗ ಏನು ?
ಯುವಕ; administrator
"ಯಾವ ಕಂಪೆನಿಯಲ್ಲಿ ?"
ಯುವಕ:ಕಂಪನಿಯಲ್ಲ ಸಧ್ಯಕ್ಕೆ ವಾಟ್ಸಪ್ ಗ್ರೂಪ್‌ಗಳ administrator ಆಗಿದ್ದೇನೆ.

*****

ಮೊದಲು ನೈವೇದ್ಯ
ನಂತರ ಮಂಗಳಾರತಿ
ಪತಿ ದೇವರಿಗೆ
ಮೊದಲು ಮಂಗಳಾರತಿ"
ನಂತರ ನೈವೇದ್ಯ

## ಜಾಹಿರಾತು ವಿವರ

| | | | | ವರ್ಣ | ಕಪ್ಪು ಬಿಳುಪು |
|---|---|---|---|---|---|
| ಮುಖಪುಟ | 1/2 ಪುಟ | ರೂ. | - | 20,000.00 | |
| ಕೊನೆಪುಟ | 1/2 ಪುಟ | ರೂ. | - | 15,000.00 | |
| ಒಳಪುಟ | 1/2 ಪುಟ | ರೂ. | - | 10,000.00 | 7,000.00 |

ಒಂದು ಬಾರಿ ಪ್ರಕಟಣೆಗೆ ಮಾತ್ರ

# ಸಹವಾಸ ದೋಷ

ಮಾಲೂರು ಎಂಬ ಹಳ್ಳಿ. ಅಲ್ಲೊಬ್ಬ ಜನಪ್ರಿಯ ರೈತನಿದ್ದ. ತನ್ನ ಪರೋಪಕಾರಿ ಗುಣಗಳಿಂದಾಗಿ ಆತ ಊರಿಗೇ ಬೇಕಾದವನಾಗಿದ್ದ. ಊರ ಮಂದಿ ತಮ್ಮೆಲ್ಲಾ ಕಷ್ಟ-ಸುಖಗಳನ್ನು ಆತನ ಬಳಿ ಹೇಳಿಕೊಳ್ಳುತ್ತಿದ್ದರು. ಆತನ ಹೆಸರು ಚೆನ್ನಿಗರಾಯ. ಪ್ರೀತಿಯಿಂದ ಆತನನ್ನು ಎಲ್ಲರೂ ಚೆನ್ನಿಗಪ್ಪ ಎಂದು ಕರೆಯುತ್ತಿದ್ದರು.

ಚೆನ್ನಿಗಪ್ಪನಿಗೆ ಇಬ್ಬರು ಮಕ್ಕಳು. ಒಂದು ಹೆಣ್ಣು ಇನ್ನೊಂದು ಗಂಡು. ಇಬ್ಬರನ್ನೂ ಚೆನ್ನಾಗಿ ಕಲಿಸಬೇಕು, ನೌಕರಿ ದೊರಕಿಸಬೇಕು, ಜನಸೇವೆ ಮಾಡಬೇಕು ಇತ್ಯಾದಿ ಕನಸು ಕಾಣುತ್ತಿದ್ದ ಚೆನ್ನಿಗಪ್ಪ. ಮಗಳು ತುಂಬಾ ಬುದ್ಧಿವಂತೆ. ಚೆನ್ನಾಗಿ ಕಲಿಯುತ್ತಿದ್ದಳು. ಆದರೆ ಮಗ ಬುದ್ಧಿವಂತನಾದರೂ ಕಲಿಕೆಯಲ್ಲಿ ಸಾಧಾರಣವಿದ್ದ. ಹೆಚ್ಚು ಓದಲಿಲ್ಲ, ಶಾಲೆ ಬಿಟ್ಟ.

ಚೆನ್ನಿಗಪ್ಪನ ಮಗನ ಹೆಸರು ಗೋಪಾಲ ಎಂದಿದ್ದರೂ, ಆತನನ್ನು ಮರಿಚೆನ್ನಿಗನೆಂದು ಕರೆಯುತ್ತಿದ್ದರು. ಕಾರಣ ಆತನ ಹಾವಭಾವ, ನಡೆನುಡಿ ಎಲ್ಲವೂ ಅಪ್ಪನದ್ದೇ ಆಗಿತ್ತು. ಮರಿಚೆನ್ನಿಗನಿಗೆ ಶಾಲಾ ಕಲಿಕೆಯ ವೇಳೆ ಕೆಲವು ಕೆಟ್ಟ ಮಿತ್ರರ ಸಹವಾಸ ತಟ್ಟಿತ್ತು. ಬೀಡಿ, ಸಿಗರೇಟು ಸೇದುವ ಅಭ್ಯಾಸ, ಅಮಲು ಪದಾರ್ಥ ಸೇವನೆ ಇತ್ಯಾದಿ ಚಟಗಳು ಅಂಟಿಕೊಂಡಿದ್ದವು. ಒಂದು ದಿನ ಮಿತಿಮೀರಿ ಅಮಲು ಪದಾರ್ಥ ಸೇವನೆ ಮಾಡಿ, ಮಾರ್ಗದ ಬದಿಯ ಚರಂಡಿಯಲ್ಲಿ ಬಿದ್ದುಕೊಂಡಿದ್ದ. ಊರ ಮಂದಿ ಅಲ್ಲಿ ನೆರೆದಿದ್ದರು. ಆಹಾ ಚೆನ್ನಿಗಪ್ಪನಿಗೆ ಇಂತಹ ಮಗ ಹುಟ್ಟಿದನೇ? ಚೆನ್ನಿಗಪ್ಪನ ಗುಣ-ನಡತೆ ಎಂತಹದು? ಆತ ಊರಿಗೆ ಬೇಕಾದವ. ಮಗನು ದುರ್ಬುದ್ಧಿಯಿಂದ ಕೆಟ್ಟ ಹಾದಿ ಹಿಡಿದನೆಂದು ಮರುಗುತ್ತಿದ್ದರು.

ತನ್ನ ಮಗನು ಅಮಲಿನ ಮತ್ತಿನಲ್ಲಿ ಬಿದ್ದಿರುವುದು ತಿಳಿಯಿತು. ದುಃಖಿಸುತ್ತಾ ಮಗನ ಬಳಿ ಹೋದ. ಆತನ ಸ್ಥಿತಿ ಕಂಡು ಕಣ್ಣೀರುಗರೆದ. ಊರ ಜನರಿಗೆಲ್ಲಾ ಬುದ್ಧಿ ಹೇಳಿ, ಮಾರ್ಗದರ್ಶನ ಮಾಡುತ್ತಿರುವ ನನಗೆ ಇಂತಹ ಮಗ ಹುಟ್ಟಿದನೇ? ನನ್ನ ಮಗನನ್ನೇ ಸರಿಹಾದಿಗೆ ತಾರದೇ ಹೋದರೆ ನಾನು ಇನ್ಯಾರಿಗೆ ಬುದ್ಧಿ ಹೇಳಲು ಸಾಧ್ಯವೆಂದು ಮನದಲ್ಲೇ ನೊಂದುಕೊಂಡನು. ತನ್ನ ಮಗನನ್ನು ಎಬ್ಬಿಸಿ ಮನೆಗೆ ಕರೆದುಕೊಂಡು ಹೋದ. ಸ್ನಾನ ಮಾಡಲು ಹೇಳಿ ಊಟಕ್ಕೆ ಕರೆದ. ಎಲ್ಲರೂ ಒಟ್ಟಾಗಿ ಕುಳಿತು ಊಟ ಮಾಡಿದರು. ಮರಿಚೆನ್ನಿಗನಿಗೆ ಆಶ್ಚರ್ಯವಾಯಿತು! ಅಪ್ಪ ಯಾಕೆ ಗದರಿಸಲಿಲ್ಲ ಎಂದು ಯೋಚಿಸುತ್ತಾ ರಾತ್ರಿ ಕಳೆದ.

ಮಾರನೆ ದಿನ ಮುಂಜಾನೆ ಮಗನನ್ನು ಕರೆದು ಚೆನ್ನಿಗಪ್ಪ ಮಾತಾಡಿಸಿದ. ಚೆನ್ನಿಗಪ್ಪನ ಕಣ್ಣಲ್ಲಿ ನೀರು ಧಾರಾಕಾರವಾಗಿ ಹರಿಯಿತು. ಅದನ್ನು ಕಂಡು ಮಗನಿಗೆ ದುಃಖ ಉಮ್ಮಳಿಸಿ ಬಂದಿತು. ಬೇರೆ ಯಾರೇ ಆಗಿದ್ದರೂ ನನ್ನನ್ನು ಹೊಡೆದು, ಹೊಡೆದು ಸಾಯಿಸುತ್ತಿದ್ದರು. ಆದರೆ ಅಪ್ಪ ಹಾಗೆ ಮಾಡಲಿಲ್ಲ. ಆತನು ಕೊಡಬಹುದಾದ ಹತ್ತಾರು ಏಟುಗಳಿಗಿಂತ ಪ್ರಬಲವಾಗಿತ್ತು. ದುಃಖದ ಕಣ್ಣೀರಿನ ಧಾರೆ ಎಂದು ಮನದಲ್ಲೇ ನೊಂದುಕೊಂಡ, ಮರಿಚೆನ್ನಿಗಪ್ಪ.

ಅಪ್ಪನ ಮುಂದೆ ನಿಂತಿದ್ದ ಮರಿಚೆನ್ನಿಗಪ್ಪ ಬೆನ್ನು ಬಾಗಿಸಿ ಕಾಲು ಮುಟ್ಟಿ ಕ್ಷಮೆ ಯಾಚಿಸಿದ. ಅಪ್ಪನಿಗೆ ಹೃದಯ ತುಂಬಿ ಬಂತು. ಯಾರದೋ ಸಹವಾಸ ದೋಷ ಆತನನ್ನು ಈ ಕೃತ್ಯಕ್ಕೆ ಬಲಿ ಮಾಡಿತೆಂದು ತಿಳಿದುಕೊಂಡನು. ಮಗನ ತಲೆಯನ್ನು ನೇವರಿಸಿ ಕ್ಷಮಿಸಿದ್ದೇನೆ ಎಂಬ ಒಂದೇ ಒಂದು ಮಾತು ಹೇಳಿದ ಚೆನ್ನಿಗಪ್ಪ. ಮರಿಚೆನ್ನಿಗಪ್ಪ ಅಲ್ಲಿಂದ ನಡೆದೇ ಬಿಟ್ಟ.

ಮರಿಚೆನ್ನಿಗಪ್ಪ ದೇವರ ಮುಂದೆ ಸುಮಾರು ಒಂದು ಗಂಟೆ ಪದ್ಮಾಸನದಲ್ಲಿ ಕುಳಿತನು. ತನ್ನ ಕೃತ್ಯಕ್ಕೆ ಮರುಗುತ್ತಾ ಕಣ್ಣೀರ ಧಾರೆಗರೆದನು. ತನ್ನ ತಪ್ಪಿಗೆ ಪಶ್ಚಾತ್ತಾಪಪಟ್ಟನು. ನಾನು ಇನ್ನೆಂದೂ ಇಂತಹ ತಪ್ಪು ಮಾಡಲಾರೆನೆಂದು ಮನದಲ್ಲೇ ಪ್ರತಿಜ್ಞೆಗೈದನು.

ಪಶ್ಚಾತ್ತಾಪದಿಂದ ಮನಸ್ಸು ಶುದ್ಧೀಕರಿಸಿಕೊಂಡ ಮರಿಚೆನ್ನಿಗಪ್ಪ ಮತ್ತೆಂದೂ ಅಂತಹ ತಪ್ಪು ಮಾಡಲೇ ಇಲ್ಲ. ತನ್ನ ಅಪ್ಪನಂತೆ ಎಲ್ಲರಿಗೂ ಬೇಕಾದವನಾಗಿ ಬೆಳೆದ. ತನ್ನ ಜೊತೆಗಾರರಿಗೆ ಮಾರ್ಗದರ್ಶಕನಾದ. ತನ್ನ ಬದುಕಿನ ಕಥೆಯನ್ನು ಹೇಳುತ್ತಾ, ಹಾದಿತಪ್ಪಿದ ಹತ್ತಾರು ಯುವಕರನ್ನು ಸನ್ಮಾರ್ಗದಲ್ಲಿ ಸಾಗುವಂತೆ ಮಾಡಿದ. ಈತನ ಬದುಕು ಹತ್ತಾರು ಮಂದಿಗೆ ಸ್ಫೂರ್ತಿಯಾಯಿತು. ಊರಿಗೆ ಊರೇ ಆತನ ಗುಣಗಾನದಲ್ಲಿ ತೊಡಗಿತು.

ತಪ್ಪು ಮಾಡುವುದು ಮಾನವ ಸಹಜ. ತಪ್ಪಿನ ಅರಿವಾದಾಗ ತಿದ್ದಿಕೊಂಡು ಸತ್ಪಥದಲ್ಲಿ ನಡೆಯುವುದರಲ್ಲೇ ಶ್ರೇಷ್ಠತೆ ಅಡಗಿದೆ. ಕೆಟ್ಟ ಘಟನೆಗಳಿಂದ ಪಾಠ ಕಲಿಯಬೇಕು. ಪರಿವರ್ತನೆಯೇ ಬದುಕು. ಗುರು-ಹಿರಿಯರಿಂದ ಬೈಸಿಕೊಂಡೋ, ದಂಡಿಸಿಕೊಂಡೋ, ಹಿತವಚನ ಕೇಳಿಕೊಂಡೋ ಕೆಟ್ಟಹಾದಿ ಬದಲಾಯಿಸಿಕೊಂಡರೆ ಭವಿಷ್ಯ ಉಜ್ವಲವಾಗುತ್ತದೆ. ●


# ಸಿಕ್ಕಿಂನಲ್ಲಿ 'ನರಕಾಸುರವಧೆ' ಮೈಕೊರೆಯುವ ಚಳಿಯಲ್ಲಿ ಬಿಸಿ ಮುಟ್ಟಿದ ಬೊಂಬೆಯಾಟ

ಕಾಸರಗೋಡು : ಗಗನ ಚುಂಬಿಸುವ ಗಿರಿಶಿಖರಗಳು... ಹಿಮಪಾತದ ನಡುವೆ ಹಿತವಾದ ತಂಗಾಳಿ... ಮೈಕೊರೆಯುವ ಚಳಿ... ಮಂಜಿನ ಹನಿಗಳ ಸಿಂಚನ, ರೋಮಾಂಚನ... ಬಾಗಿದಷ್ಟೂ ಮುದಗೊಳ್ಳುವ ಮನಸ್ಸು, ಮಾಗಿದಷ್ಟೂ ಹದಗೊಳ್ಳುವ ವಯಸ್ಸು, ಇದು ಸಿಕ್ಕಿಂನ ವಿಶೇಷತೆ.

ಹಿಮಾಲಯ ಪರ್ವತ ಶ್ರೇಣಿಯ ಪ್ರಕೃತಿ ರಮಣೀಯ ದೃಶ್ಯ ಸಾನಿಧ್ಯ ಸಿಕ್ಕಿಂನ ರಾಜಧಾನಿ ಗಾಂಗ್‌ಟಾಕ್‌ನಲ್ಲಿ "ಪುತುಲ್ ಪರಂಪರಾ" ಬೊಂಬೆಯಾಟ ಉತ್ಸವ ನಡೆಯಿತು. ಭಾರತ ಸರಕಾರದ ಕೇಂದ್ರ ಸಂಗೀತನಾಟಕ ಅಕಾಡೆಮಿ ಮತ್ತು ಸಿಕ್ಕಿಂ ಸರಕಾರದ ಸಂಸ್ಕೃತಿ ಪರಂಪರಾಗತ ಕಲೆಗಳ ಸಚಿವಾಲಯದ ಜಂಟಿ ಆಶ್ರಯದಲ್ಲಿ ಉತ್ಸವವನ್ನು ಆಯೋಜಿಸಲಾಗಿತ್ತು. ಕಾಸರಗೋಡಿನ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘಕ್ಕೆ ಅಧಿಕೃತ ಆಹ್ವಾನ ಬಂದಿದ್ದು ಸಂಘದ ವತಿಯಿಂದ "ನರಕಾಸುರ ವಧೆ" ಯಕ್ಷಗಾನ ಬೊಂಬೆಯಾಟ ಯಶಸ್ವಿಯಾಗಿ ಪ್ರದರ್ಶನಗೊಂಡಿತು.

ಬೃಹತ್ ಬೆಟ್ಟಗಳ ಮೇಲೆ ಬೆಣ್ಣೆಯಂತಿರುವ ಮಂಜಿನ ಮಧ್ಯೆ ಕೈಲಾಸವನ್ನು ಹೋಲುವ ಸಾನ್ನಿಧ್ಯದಲ್ಲಿ ಯಕ್ಷ ಗಂಧರ್ವ ಲೋಕ ಸೃಷ್ಟಿಯಾದಾಗ ಪ್ರೇಕ್ಷಕರು ಬೆರಗಾದರು. ಶ್ರುತಿಮಧುರವಾದ ಹಾಡು, ಚೆಂಡೆ, ಮದ್ದಳೆ, ಚಕ್ರತಾಳದ ನಿನಾದ, ಸೂತ್ರದ ಮೂಲಕ ಪಾತ್ರಗಳ ಕುಣಿತ ಮಣಿತ, ಅಟ್ಟಹಾಸ, ಆರ್ಭಟ, ಆವೇಶ ನೆರೆದವರನ್ನು ಮಂತ್ರ ಮುಗ್ಧರನ್ನಾಗಿಸಿತು.

ಗಾಂಗ್‌ಟಾಕ್‌ನ ಮನವ್ ಕೇಂದ್ರ ಆಡಿಟೋರಿಯಂನಲ್ಲಿ ಬೊಂಬೆಯಾಟ ಉತ್ಸವ ಆಯೋಜಿಸಲಾಗಿದ್ದು, ಅಂತಾರಾಷ್ಟ್ರೀಯ ಖ್ಯಾತಿಯ ಬೊಂಬೆಯಾಟ ತಂಡಗಳಿಗೆ ಮಾತ್ರ ಪ್ರದರ್ಶನದ ಅವಕಾಶ ಕಲ್ಪಿಸಲಾಗಿತ್ತು. ಸುಮಾರು ಇಪ್ಪತ್ತು ತಂಡಗಳು ವಿವಿಧ ಪ್ರಕಾರಗಳ ಪ್ರದರ್ಶನ ನೀಡಿದ್ದವು. ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟದ ನಿರ್ದೇಶಕ ಹಾಗೂ ಪ್ರಧಾನ ಸೂತ್ರಧಾರ ರಮೇಶ್ ಕೆ.ವಿ. ಅವರ ನೇತೃತ್ವದಲ್ಲಿ "ನರಕಾಸುರವಧೆ" ಯಕ್ಷಗಾನ ಬೊಂಬೆಯಾಟ ಪ್ರದರ್ಶನಗೊಂಡಿತು. ಭಾರತದ ಸರ್ವಾಂಗ ಸುಂದರ ಕಲೆಯಾದ ಯಕ್ಷಗಾನವು





ಬೊಂಬೆಯಾಟದ ಮೂಲಕ ಪ್ರದರ್ಶನಗೊಳ್ಳುತ್ತಿರುವುದನ್ನು ಕಂಡ ವಿದೇಶಿ ಕಲಾವಿದರು, ಕಲಾಸಕ್ತರು ಸೂತ್ರದ ಮೂಲಕ ಅಭಿವ್ಯಕ್ತಗೊಂಡ ಈ ಕಲಾಪ್ರಕಾರಕ್ಕೆ ಅಮೋಘ ಕರತಾಡನದೊಂದಿಗೆ ಮೆಚ್ಚುಗೆ ಸೂಚಿಸಿದರಲ್ಲದೆ ಸೂತ್ರಧಾರರನ್ನು ಅಭಿನಂದಿಸಿದರು. ಸಂಪ್ರದಾಯಬದ್ಧ ಶೈಲಿಯಲ್ಲಿ ಮೂಡಿ ಬಂದ ಭಾಗವತಿಕೆ, ಹಿಮ್ಮೇಳ, ಅರ್ಥಗಾರಿಕೆ, ವೇಷಭೂಷಣ, ನಾಟ್ಯ ಹೀಗೆ ಅಭಿವ್ಯಕ್ತಿ ವಿಧಾನ ಸರ್ವತ್ರ ಶ್ಲಾಘಿಸಲ್ಪಟ್ಟಿತು.

ಪ್ರಧಾನ ಸೂತ್ರಧಾರ ರಮೇಶ್ ಕೆ.ವಿ., ಸಹಸೂತ್ರಧಾರರಾದ ಡಾ. ಓಂ ಪ್ರಕಾಶ್ ಕೆ.ವಿ., ಸುದರ್ಶನ ಕೆ.ವಿ., ಅನಿತಾಕೆ.ವಿ., ಚಂದ್ರಶೇಖರ ವಿ. ಮತ್ತು ಮನೋರಮಾ ಎಡನೀರು ಅವರನ್ನು ಬೊಂಬೆಯಾಟ ಉತ್ಸವ ಸಮಿತಿಯಿಂದ ಭಾರತ ಮತ್ತು ಸಿಕ್ಕಿಂ ಸರಕಾರಗಳ ಸಾಂಸ್ಕೃತಿಕ ರಾಯಭಾರಿಗಳು ಸನ್ಮಾನಿಸಿದರು.

ಸೂತ್ರದ ಬೊಂಬೆಯಾಟದ ಮೂಲಕ ಯಕ್ಷಗಾನವನ್ನು ಉಳಿಸಲು ಮತ್ತು ಪ್ರಚುರ ದೀಕ್ಷೆ ತೊಟ್ಟಿರುವ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘವು ಈಗಾಗಲೇ ಮೂರು ಸಾವಿರಕ್ಕೂ ಹೆಚ್ಚು ಬೊಂಬೆಯಾಟ ಪ್ರದರ್ಶಿಸಿದ್ದು, ಆರು ಬಾರಿ ವಿದೇಶಗಳಲ್ಲಿ ಪ್ರದರ್ಶನ ನೀಡಿದೆ. 1998ರಲ್ಲಿ ಪಾಕಿಸ್ತಾನ, 2004ರಲ್ಲಿ ಪ್ಯಾರಿಸ್, 2009ರಲ್ಲಿ ದುಬಾಯಿ, 2010ರಲ್ಲಿ ಪ್ರಾಗ್, 2013ರಲ್ಲಿ ಚೈನಾ ದೇಶದಲ್ಲಿ ನಡೆದ ಅಂತಾರಾಷ್ಟ್ರೀಯ ಬೊಂಬೆಯಾಟ ಉತ್ಸವದಲ್ಲಿ ಭಾಗವಹಿಸಿ ವಿಶ್ವಕಲಾರಂಗದಲ್ಲಿ ಪ್ರತಿಷ್ಠಿತ ಸ್ಥಾನ ಪಡೆದಿದೆ. ಇದೀಗ ಸಿಕ್ಕಿಂನಲ್ಲಿ ನಡೆದ ಬೊಂಬೆಯಾಟ ಉತ್ಸವದಲ್ಲಿ ಭಾಗವಹಿಸಿರುವುದು ತಂಡಕ್ಕೆ ವಿಶೇಷ ಅನುಭವ ನೀಡಿದೆ. ಕೇಂದ್ರ ಸರಕಾರದ ಸಂಗೀತ ನಾಟಕ ಅಕಾಡೆಮಿಯ ಅಧಿಕೃತ ಆಹ್ವಾನಿತ ತಂಡವಾಗಿ ಸಂಘವು ಅಂಗೀಕೃತಗೊಂಡಿರುವುದು ಕಾಸರಗೋಡಿಗೆ ಅಭಿಮಾನವಾಗಿದೆ.

ಕೃತಿಯ ಕುರಿತು

# ಬದುಕು ಬದಲಾಯಿಸಬಲ್ಲ ಮಕ್ಕಳ ಕಥೆಗಳು




ಕೃತಿ : ಬದುಕು ಬದಲಾಯಿಸಬಲ್ಲ ಮಕ್ಕಳ ಕಥೆಗಳು
ನಾರಾಯಣ ಭಟ್ ಟಿ., ರಾಮಕುಂಜ
ಪ್ರ : ಮೌಲಿಕಾ ಪ್ರಕಾಶನ
ಬೆಲೆ : 90
ಸಂಪರ್ಕ : 08251-258011

ಪೋಷಕರು ತಮ್ಮ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡುವ ಮೊದಲೇ ತಾವು ತಿಳಿದ, ಕಲಿತ, ಕೇಳಿದ ಕಥೆಗಳನ್ನು ಅವರಿಗೆ ಹೇಳಿ, ಅವರನ್ನು ರಂಜಿಸುವ, ಪ್ರಚೋದಿಸುವ ಮತ್ತು ಕಥೆಗಳನ್ನು ಅವರಿಗೆ ಹೇಳಿ, ಅವರನ್ನು ರಂಜಿಸುವ, ಪ್ರಚೋದಿಸುವ ಮತ್ತು ಪ್ರಜ್ಞಾವಂತರನ್ನಾಗಿ ಮಾಡುವ ಕಾರ್ಯ ಬಹಳ ಹಿಂದಿನಿಂದಲೂ ರೂಢಿಯಲ್ಲಿತ್ತು. ಆದರೆ ಈಗ ಆಧುನಿಕ ಜೀವನಶೈಲಿಯಲ್ಲಿ, ಪೋಷಕರಿಗಾಗಲಿ, ಗುರುಹಿರಿಯರಿಗಾಗಲಿ ಮಕ್ಕಳಿಗೆ ಕಥೆ ಹೇಳುವ ಕಾಯಕ ಮಾಡಲಿಕ್ಕೆ ಬಿಡುವು ಸಿಗದ ಕಾರಣ ಎಳೆ ಮಕ್ಕಳು ಆ ಭಾಗ್ಯದಿಂದ ವಂಚಿತರಾಗುತ್ತಿದ್ದಾರೆ.

ಸುಭಾಷಿತ ಸೂತ್ರವೊಂದು ಹೀಗಿದೆ :

ಮಾತಾ ಶತ್ರು ಪಿತಾ ವೈರಿ ಯೇನ ಬಾಲೋ ನ ಪಾಠಿತಾ:

ಮಕ್ಕಳನ್ನು ಓದಿಸದ ತಾಯಿ ಶತ್ರು, ತಂದೆ ವೈರಿ.

ಮಕ್ಕಳ ವಿದ್ಯಾಭ್ಯಾಸ ಪ್ರಾರಂಭಗೊಳ್ಳುವುದೇ ತಂದೆ ತಾಯಿಯರು ಕಥೆಗಳನ್ನು ಹೇಳುವ ಮುಖಾಂತರ, ಗುರುಹಿರಿಯರು ನುಡಿಯುವ ಹಿತವಚನಗಳಿದಂದ, ಅತ್ಯುತ್ತಮ ಶಿಕ್ಷಕರಾದಂತಹ ಶ್ರೀ ನಾರಾಯಣ ಭಟ್ಟರಂತಹ ಸಹೃದಯ ಶಿಕ್ಷಕರ ಲೇಖನಿಯಿಂದ ಮೂಡಿಬಂದ ಕಥೆಗಳಿಂದ ಶ್ರೀ ಭಟ್ಟರು ರಚಿಸಿದ ಕಥೆಗಳು ಮಕ್ಕಳ ಸುಪ್ತ ಪ್ರತಿಭೆಗಳನ್ನು ಅರಳಿಸುವುದಷ್ಟೇ ಅಲ್ಲದೆ, ಅವುಗಳಿಂದ ಹೊಸ ಆಯಾಮ ನೀಡುವ ಮತ್ತು ಪ್ರಜ್ಞಾವಂತರನ್ನಾಗಿ ಮಾಡುವ ಕಥಾ ಕಣಜವೇ ಆಗಿದೆ.

ಶ್ರೀ ಭಟ್ಟರು ತಮ್ಮ ಮಾತುಗಳಲ್ಲಿ ಹೇಳಿದಂತೆ, 'ಮಕ್ಕಳ ಬದುಕನ್ನು ಆದರ್ಶದೆಡೆಗೆ ಬದಲಾಯಿಸಬಲ್ಲ ಕಥೆಗಳಾಗಿವೆ' ಮತ್ತು 'ಮಕ್ಕಳ ಬದುಕಿಗೆ ದಾರಿತೋರಬಲ್ಲ ಕಥೆಗಳಾಗಿವೆ' ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಮಕ್ಕಳಲ್ಲಿ ಸ್ವಾಭಿಮಾನದ ಕೆಚ್ಚು ಮೂಡಿಸುವ ತಾವು ದುಡಿದು ಒಳ್ಳೆಯ ಸತ್ಪ್ರಜೆಗಳಾಗುವಂತಹ 'ಭ್ರಷ್ಟತೆಯಿಂದ ಮುಕ್ತಿ ಕಂಡ ಸತ್ಯದೇವ' 'ದೇಶಭಕ್ತಿ ಕಲಿಸುವ ಕಾಲೇಜು' ;ಪರಿಶ್ರಮದಿಂದ ಪರಿವರ್ತನೆ' ಮುಂತಾದ ಕಥೆಗಳನ್ನು ರಚಿಸಿದ ಶ್ರೀ ಭಟ್ಟರ ಕಥಾಬರಹ ಅನನ್ಯ, ಅಪರೂಪ ಹಾಗೂ ಅನುರೂಪ. ಅವರಿಗೆ ನಾನು ತುಂಬುಹೃದಯದಿಂದ ಅಭಿನಂದಿಸುತ್ತೇನೆ.

ಶ್ರೀ ಭಟ್ಟರಂತಹ ಉತ್ಕೃಷ್ಟ ಶಿಕ್ಷಕರನ್ನು ಹೊಂದಿರುವ ಶಾಲೆ, ನಮ್ಮ ನಾಡು ಎಷ್ಟು ಧನ್ಯ! ಶ್ರೀ ಭಟ್ಟರಂತಹ ಶಿಕ್ಷಕರಿದ್ದರೆ, ಮಕ್ಕಳ ಶಿಕ್ಷಣ, ವಿದ್ಯಾಭ್ಯಾಸ, ಏಳಿಗೆ, ಅವರಿಂದ ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಸಂಶಯವೇ ಇಲ್ಲ ಎಂಬ ಬಲವಾದ ನಂಬಿಕೆ ನನ್ನದು. ಅವರ ಕ್ರಿಯಾಶಕ್ತಿ, ಸಕಲ ಇಷ್ಟಾರ್ಥ, ಅವರ ಮಹತ್ವದ ಶಿಕ್ಷಣ ಸೇವೆ, ಸಾಮಾಜಿಕ ಹಾಗೂ ಧಾರ್ಮಿಕ ಸೇವೆ ಸರ್ವವೂ ನಿರಂತರವಾಗಿ ಸಾಗಲಿ ಎಂದು ಹಾರೈಸುತ್ತೇನೆ.

– ಆಗುಂಬೆ ಎಸ್ ನಟರಾಜ್



ನಾರಾಯಣ ಭಟ್ ಟಿ. ರಾಮಕುಂಜ

ಮಕ್ಕಳಿಗೆ ಶಿಕ್ಷಣವನ್ನು ಭೋಧಿಸುತ್ತಾ ಮಕ್ಕಳ ಮನಸ್ಸನ್ನು ಅರಿತು ಅವರಿಗೆ ಶಿಕ್ಷಣದ ಜೊತೆ ಜೊತೆಯಲ್ಲೇ ಸಂಸ್ಕಾರಗಳನ್ನು ತುಂಬಿ ನಾಳಿನ ಸತ್ಪ್ರಜೆಯಾಗಿ ರೂಪಿಸುತ್ತಾ ಕಳೆದ ಮೂರುವರೆ ದಶಕದಿಂದಲೂ ತನ್ನ ಶಿಕ್ಷಣವೃತ್ತಿಯ ಪಾವಿತ್ರ್ಯಯನ್ನು ಕಾಪಾಡಿಕೊಂಡು ಬರುತ್ತಿರುವವರು ರಾಮಕುಂಜದ ನಾರಾಯಣ ಭಟ್ಟರು. ವಿದ್ಯಾರ್ಥಿಗಳ ಬಗ್ಗೆ ಅಪಾರ ಕಾಳಜಿ ಇಟ್ಟುಕೊಂಡಿರುವ ನಾರಾಯಣ ಭಟ್ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿ, ಸುಸಂಸ್ಕೃತರಾಗಿ ಬೆಳೆದವರು. ಬೆಳೆದ ಪರಿಸರದ ಹಿನ್ನಲೆಯಲ್ಲಿ ಮಕ್ಕಳನ್ನು ಸುಸಂಸ್ಕೃತರನ್ನಾಗಿಸುವ ಪ್ರಯತ್ನದಲ್ಲಿ ಯಶಸ್ಸನ್ನು ಕಾಣುತ್ತಿರುವವರು

ದ.ಕ ಜಿಲ್ಲೆಯ ರಾಮಕುಂಜದ ಶ್ರೀ ರಾಮಕುಂಜೇಶ್ವರ ಸಂಸ್ಕೃತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಈ ಶಾಲೆಯ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಗುರುಗಳಾಗಿ, ಶಿಕ್ಷಕರಿಗೆ ಉತ್ತಮ ಸ್ನೇಹಿತರಾಗಿ, ಆಡಳಿತ ಮಂಡಳಿಯ ವಿಶ್ವಾಸಕ್ಕೆ ಪಾತ್ರರಾಗಿರುವ ಶ್ರೀಯುತರು ನಿಷ್ಕಲ್ಮಶ ಹೃದಯವಂತರು. ವಿಚಾರ ಪಾಂಡಿತ್ಯವಿರುವ ಶ್ರೀ ಭಟ್ಟರು ಎಂದೂ, ಎಲ್ಲೂ ನಾ ಮುಂದು ಎಂದು ಬಾಯಿ ತೂರಿಸದೆ, ಇತರರಿಗೆ ಮಾತನಾಡಲು ಅವಕಾಶ ನೀಡಿ ಎಲ್ಲವನ್ನೂ ಆಲಿಸಿ ನಂತರ ವಿಚಾರ ಚೌಕಟ್ಟಿನೊಳಗೆ ತಾಳ್ಮೆಯಿಂದ, ಸರಳ ಮಾತುಗಾರಿಕೆಯಿಂದ ವಿಚಾರವನ್ನು ಮನವರಿಕೆ ಮಾಡಿಕೊಡುವಲ್ಲಿ ಸಫಲರು. ಇವರ ಮಾತುಗಾರಿಕೆ, ಸಮಯಪ್ರಜ್ಞೆ ಇವರ ಶಿಷ್ಯರಿಗೆ ಸ್ಫೂರ್ತಿದಾಯಕ. ಶ್ರೀ ಭಟ್ಟರ ಮೂರುವರೆ ದಶಕಗಳ ನಿಸ್ವಾರ್ಥ ಸೇವೆಯ ಪ್ರತಿಫಲವಾಗಿ ಇಂದು ಶ್ರೀ ರಾಮಕುಂಜೇಶ್ವರ ಸಂಸ್ಕೃತ ಹಿರಿಯ ಪ್ರಾಥಮಿಕ ಶಾಲೆ ರಾಜ್ಯದ ಉದ್ದಗಲಕ್ಕೂ ಹೆಸರು ಮಾಡಿದೆ. ಈ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳಿಗೆ ಹೊರಗಡೆ ಗೌರವ ಸಿಕ್ಕುವ ಹಾಗೆಯೇ, ಹೊರಗಿನಿಂದ ಬರುವ ವಿದ್ಯಾರ್ಥಿಗಳಿಗೂ ಆಸಕ್ತಿ, ಉತ್ಸಾಹವನ್ನು ಹೆಚ್ಚಿಸುತ್ತಿದೆ. "ನಾವು ಸಮಯವನ್ನು ಹಾಳು ಮಾಡಿದರೆ, ಸಮಯ ನಮ್ಮನ್ನು ಹಾಳು ಮಾಡುತ್ತದೆ" ಎಂದು ನುಡಿಯ ಮಹತ್ವವನ್ನು ಅರಿತಿರುವ ಇವರು ಕಾಲವನ್ನು ವ್ಯರ್ಥಮಾಡದೆ, ಬಿಡುವಿನ ವೇಳೆಯಲ್ಲಿ ಆಧ್ಯಾತ್ಮಿಕ ಚಿಂತನೆ, ಸಮಾನಮನಸ್ಕರೊಡನೆ ವಿಚಾರ ವಿನಿಮಯ, ಪೂಜಾ ಕೈಂಕರ್ಯದಲ್ಲಿ ಪಾಲ್ಗೊಳ್ಳುವ ಹವ್ಯಾಸ ಹೊಂದಿದ್ದರೆ. ನಾಳಿನ ಆರೋಗ್ಯಕರ ಸಮಾಜಕ್ಕಾಗಿ, ಮೌಢ್ಯತೆ ಬಗ್ಗೆ ಜನರಲ್ಲಿ ಅರಿವು ಮೂಡಿಸಿ ಜಾಗೃತರಾಗುವಂತೆ ಮಾಡುವಲ್ಲಿ ಇವರ ಪಾತ್ರ ಪ್ರಮುಖವಾದುದು. ವಿದ್ಯಾರ್ಥಿಗಳ ಬಗೆಗೆ ಅಪಾರ ಕಾಳಜಿ ಇಟ್ಟುಕೊಂಡಿರುವ ಭಟ್ಟರು ವಿದ್ಯಾರ್ಥಿಗಳಿಗಾಗಿ ಉತ್ತಮ ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಕಡಿಮೆ ಅವಧಿಯಲ್ಲಿ ಪ್ರತಿಗಳು ಮಾರಾಟವಾಗಿ ಮರುಮುದ್ರಣಗೊಳ್ಳುತ್ತಿರುವುದು ಅವರು ಉತ್ತಮ ಲೇಖಕರೆಂದು ನಿರೂಪಿಸಿದೆ. ನಡೆ-ನುಡಿಗೆ ಹತ್ತಿರವಿರುವ, ಸರಳ ಸಜ್ಜನಿಕೆಯ ಶಿಕ್ಷಕರಾದ ಇವರನ್ನು ಗುರುತಿಸಿ 2005ರಲ್ಲಿ ರಾಜ್ಯ ಪ್ರಶಸ್ತಿಯನ್ನು, 2009ರಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅನೇಕ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ-ಪುರಸ್ಕಾರಗಳು ಹರಿದುಬರುತ್ತಿದೆ. ಇವರ ಬತ್ತಳಿಕೆಯಲ್ಲಿರುವ ಅಮೂಲ್ಯ ಮೌಲಿಕ ವಿಚಾರಗಳು ಕೃತಿಯ ರೂಪದಲ್ಲಿ ಇನ್ನಷ್ಟು ಹೊರಬರಲಿ ಎಂಬುದೇ ನಮ್ಮೆಲ್ಲರ ಆಶಯ ಶುಭವಾಗಲಿ,

– ಅಡ್ವೈಸರ್ ಸಿ. ಬಸವರಾಜು, ಮಂಡ್ಯ




SPECIAL PACKAGE TO MALDIVES, DUBAI, SINGAPORE, THAILAND













Contact : ATLAS HOPPERS PVT. LTD.
No.26, Abv Casa Piccola, CMH Road, Indiranagar, Bangalore - 560038
+(91)-(80)-41229400 WIN IPAD2 +(91)-9845449570 +(91)-(80)-41226889
E-mail : info@atlashoppers.com
www.atlashoppers.com

## ವಾಟ್ಸ್‌ಪ್ ವಿ-ಚಿತ್ರಗಳು



ಎರಡು ತಲೆಯ ನರಹುಲಿ...!



ಎಲೆಲೇ ಎಂಥ...... ಛತ್ರಿ...?



ಬಣ್ಣ ಬಣ್ಣದ ಬಾಳೆಹಣ್ಣು




ತಡಯಲಾರದ ಸೆಕೆ...

Printed, Published and owned by K.P. Manjunath, Raghu Building, Urvastore Mangalore - 575 006. Printed at Digantha Mudrana, Yeyyady Mangalore - 575 008. Published at Raghu Building, Urvastore Mangalore - 575 006 Edtor , K.P. Manjunath Raghu Building, Urvastore, Mangalore - 575 006.